MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com Yuva Marga yuva_marga_

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

| ಸಂಪುಟ: 05 | ಸಂಚಿಕೆ: 111 | ಮಂಗಳವಾರ : 17-02-2026 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00 |
|---|---|---|---|---|---|---|
| VOLUME: 05 | ISSUE: 111 | TUESDAY : 17-02-2026 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00 |

## ಪತ್ರಕರ್ತರ ತುರ್ತು ನಿಧಿ ಯೋಜನೆ ರೂಪಿಸಿದ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಕಾರ್ಯ ಶ್ಲಾಘನೀಯ



ಯುವಮಾರ್ಗ ಸುದ್ದಿ

**ರಾಯಚೂರು ಫೆ,16–** ರಾಯಚೂರು ರಿಪೋರ್ಟರ್ಸ್ ಗಿಲ್ಡ್ ರೂಪಿಸಿರುವ ಪತ್ರಕರ್ತರ ತುರ್ತು ನಿಧಿಯಿಂದ ಹಿರಿಯ ಪತ್ರಕರ್ತ ದಿ.ಸೈಯ ದ್ ಅಶ್ರಫ್ ಅವರ ಕುಟುಂಬಕ್ಕೆ 1 ಲಕ್ಷ ರೂಪಾಯಿ ಚೆಕ್ ವಿತರಣೆ ಕಾರ್ಯಕ್ರಮ ಫೆ.16ರಂದು ನಡೆಯಿತು.

ರಾಯಚೂರು ಪ್ರವಾಸದಲ್ಲಿದ್ದ, ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರಾದ ಸಲೀಂ ಅಹ್ಮದ್ ಅವರು ನಗರದ ಪತ್ರಿಕಾ ಭವನಕ್ಕೆ ಆಗಮಿಸಿ ಸೈಯದ್ ಅಶ್ರಫ್ ಅವರ ಕುಟುಂಬದವರಿಗೆ ಪತ್ರಕರ್ತರ ಸಮಕ್ಷಮದಲ್ಲಿ ಚೆಕ್ ವಿತರಿಸಿದರು.

ಈ ವೇಳೆ ಸಲೀಂ ಅಹ್ಮದ್ ಅವರು ಮಾತನಾಡಿ, ಪತ್ರಕರ್ತರು ಸಮಾಜದ ಎರಡು ಕಣ್ಣುಗಳಿದ್ದಂತೆ ಎಂದು ಪತ್ರಿಕಾವೃತ್ತಿಯ ಘನತೆ ಬಗ್ಗೆ ವಿವರಿಸಿದರು.

ರಾಯಚೂರು ರಿಪೋರ್ಟರ್ಸ್ ಗಿಲ್ಡ್ ತುರ್ತು ನಿಧಿಗೆ ಅನುದಾನ ಒದಗಿಸುವ ಕುರಿತು ಮುಖ್ಯಮಂತ್ರಿ ಹಾಗೂ ಮಾಧ್ಯಮ ಸಲಹೆಗಾರರೊಂದಿಗೆ ಚರ್ಚೆ ನಡೆಸಲಾಗುವುದು. ಗಿಲ್ಡನ ಬೆಳ್ಳಿ ಮಹೋತ್ಸವ ಕಾರ್ಯಕ್ರಮಕ್ಕೂ ಸಹಕಾರ ನೀಡುವುದಾಗಿ ಅವರು ಭರವಸೆ ನೀಡಿದರು. ಪತ್ರಕರ್ತರ ಹಿತಕ್ಕಾಗಿ ಎಲ್ಲರೂ ಕೈಜೋಡಿಸಬೇಕು ಎಂದರು.

ಇದಕ್ಕು ಮೊದಲು ಗಿಲ್ಡನ ಅಧ್ಯಕ್ಷ ವಿಜಯ ಜಾಗಟಗಲ್ ಅವರು ಮಾತನಾಡಿ, ಸೈಯದ್ ಅಶ್ರಫ್ ಅವರ ಪತ್ರಿಕಾ ಸೇವೆಯ ಬಗ್ಗೆ ವಿವರಿಸಿದರು.

ನಗರದಲ್ಲಿ 200ಕ್ಕು ಹೆಚ್ಚು ಪತ್ರಕರ್ತರು ಕಾರ್ಯನಿರ್ವಹಿಸುತ್ತಿದ್ದು, ಅವರಿಗಾಗಿ ತುರ್ತು ನಿಧಿ, ಆರೋಗ್ಯ ವಿಮೆ ಸೇರಿದಂತೆ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ, ರಾಜ್ಯ ನೀತಿ ಆಯೋಗದ ಸದಸ್ಯರಾದ ಡಾ.ರಝಾಕ್ ಉಸ್ತಾದ್, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷರಾದ ಆರ್.ಗುರುನಾಥ, ರಾಜ್ಯ ಸಮಿತಿ ಸದಸ್ಯ ಬಸವರಾಜ ನಾಗಡದಿನ್ನಿ, ಮುಖಂಡರಾದ ಬಷೀರುದ್ದಿನ್, ಮಹಮ್ಮದ್ ಶಾಲಂ, ಅಸ್ಲಂ ಪಾಷಾ, ರುದ್ರಪ್ಪ ಅಂಗಡಿ ಸೇರಿದಂತೆ ಜಿಲ್ಲೆಯ ಹಿರಿಯ, ಕಿರಿಯ ಪತ್ರಕರ್ತರು ಇದ್ದರು.

## ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ತರಬೇತಿ ಕಾರ್ಯಗಾರ



ಯುವಮಾರ್ಗ ಸುದ್ದಿ

**ರಾಯಚೂರು ಫೆ,16**–ಪ್ರತಿಯೊಬ್ಬ ಭಾರತೀಯರು ತಮ್ಮ ಮೂಲಭೂತ ಹಕ್ಕುಗಳನ್ನು ಪಡೆಯುವುದು ಸಂವಿಧಾನದ ಆಶಯವಾಗಿದೆ. ಕಾನೂನು ಸೇವಾ ಪ್ರಾಧಿಕಾರ ಸೇರಿದಂತೆ ಸರ್ಕಾರದ ಸವಲತ್ತು ಮುಟ್ಟಿಸುವ ಕೆಲಸವನ್ನು ಅರೆಕಾಲಿಕ ಸೇವಾ ಸ್ವಯಂ ಸೇವಕರು ಮಾಡಬೇಕೆಂದು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಗೌರವಾನ್ವಿತ ಮಹಾವರಕರ್ ಗುಲ್ಜರ್ ಲಾಲ್ ಅವರು ಹೇಳಿದರು.

ಫೆ.16ರ ಸೋಮವಾರ ದಂದು ನಗರದ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಔಟ್ ಲಾಡ್ ಇಂಡಿಯಾ (2ನೇ ಪುಟಕ್ಕೆ>>>)

## ಗೃಹ ಆರೋಗ್ಯ ಯೋಜನೆಯ ಮಹತ್ವ ಅರಿಯೋಣ: ಡಾ.ಸುರೇಂದ್ರ ಬಾಬು ಸಲಹೆ



ಯುವಮಾರ್ಗ ಸುದ್ದಿ

**ರಾಯಚೂರು ಫೆ,16**–ಆರ್ಥಿಕ ತೊಂದರೆಯುಳ್ಳ ನಗರದ ಪ್ರದೇಶದ ಜನತೆಗೂ ಸಹ ಶೀಘ್ರದಲ್ಲಿಯೇ ಗೃಹ ಆರೋಗ್ಯ ಯೋಜನೆಯನ್ನು ವಿಸ್ತರಿಸಿ ಸೌಲಭ್ಯ ಒದಗಿಸುವುದಕ್ಕೆ ಅಗತ್ಯ ಸಿದ್ಧತೆ ಕೈಕೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಹೇಳಿದರು.

ಫೆ.16ರ ಸೋಮವಾರ ನಗರದ ಜಿಲ್ಲಾ ಆರೋಗ್ಯ ತರಬೇತಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳ ವಿಭಾಗದಿಂದ ವಿವಿಧ ವೈದ್ಯಾಧಿಕಾರಿಗಳಿಗೆ, ಆರೋಗ್ಯ ನಿರೀಕ್ಷಣಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರಿಗೆ ಹಮ್ಮಿಕೊಳ್ಳಲಾಗಿದ್ದ ಗೃಹ ಆರೋಗ್ಯ ಯೊಜನೆಯ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕರ್ನಾಟಕ ಸರಕಾರವು ಆರೋಗ್ಯ ಸೇವೆ–ಮನೆ ಬಾಗಿಲಿಗೆ ಎಂಬ ಧ್ಯೇಯದಡಿ ಜೀವನ ಶೈಲಿಯ ಖಾಯಿಲೆಗಳಾದ ರಕ್ತದೊತ್ತಡ, ಸಕ್ಕರೆ ಖಾಯಿಲೆ ಜೊತೆ ಜೊತೆಗೆ ಕ್ಯಾನ್ಸರ್ ಪತ್ತೆ ಹಾಗೂ ಚಿಕಿತ್ಸೆ ಸೇರಿದಂತೆ 14 ವಿವಿಧ ಆರೋಗ್ಯ ಸೇವೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಒದಗಿಸಿದಂತೆ ನಗರದ ಪ್ರದೇಶದ ಅರ್ಥಿಕ ತೊಂದರೆಯುಳ್ಳ ಜನತೆಗೂ ಸಹ ಶೀಘ್ರದಲ್ಲಿಯೇ ಒದಗಿಸಲು ನಿರ್ಧರಿಸಲಾಗಿದ್ದು, ಈ ದಿಶೆಯಲ್ಲಿ ಎಲ್ಲರೂ ಜನತೆಗೆ ಗುಣಮಟ್ಟದ ಆರೋಗ್ಯ ಸೇವೆ ನೀಡಲು ತರಬೇತಿಯ ಮಹತ್ವ ಪಡೆದುಕೊಳ್ಳಬೇಕು ಎಂದರು.

ಆರ್ಥಿಕ ದುರ್ಬಲ ವರ್ಗದದವರಿಗೆ ಮನೆ ಮಟ್ಟದಲ್ಲೇ ಆರೋಗ್ಯದ ಸೌಲಭ್ಯ ದೊರಕಿಸಿ ಅವರ ಕುಟುಂಬಕ್ಕಾಗುವ ಆರ್ಥಿಕ ಹೊರೆಯನ್ನು ದೂರಮಾಡಲು ಗೃಹ ಆರೋಗ್ಯದಡಿ ಅಧಿಕ ರಕ್ತದೊತ್ತಡ, ಮಧುಮೇಹ, ಮೂತ್ರ ಪಿಂಡದ ಖಾಯಿಲೆ, ಲಿವರ ಸಮಸ್ಯೆ, ಕ್ಯಾನ್ಸರ್, ತಾಯಿ ಮಗುವಿನ ಆರೋಗ್ಯ, ರಕ್ತ ಹೀನತೆ, ಮಾನಸಿಕ ಕಾಯಿಲೆ, ಕ್ಷಯರೋಗ ಲಕ್ಷಣಗಳು ಮುಂತಾದವುಗಳನ್ನು ಶೀಘ್ರವಾಗಿ ಪತ್ತೆ ಹಚ್ಚಿ ಚಿಕಿತ್ಸೆಯನ್ನು ಕೊಡಿಸುವ ಮಹತ್ವಾಕಾಂಕ್ಷಿ ಉದ್ದೇಶವನ್ನು ತರಬೇತಿಯಲ್ಲಿ ಅರ್ಥೈಸಿಕೊಂಡು ಸಮರ್ಪಣಾ ಭಾವದಿಂದ ಕಾರ್ಯ ನಿರ್ವಹಿಸುವಂತೆ ಸೂಚಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದೀತಾ ಎಮ್.ಎನ್., ಡಿಪಿಡಿಓ ಡಾ.ಚಂದ್ರಶೇಖರಯ್ಯ ಸ್ವಾಮಿ, ತಜ್ಞ ವೈದ್ಯರಾದ ಡಾ.ಶ್ರೀನಿವಾಸ್, ಡಾ.ವಂದನಾ, ಡಾ.ಮನೋಹರ ಪತ್ತಾರ, ತಾಲೂಕಾ ಆರೋಗ್ಯಾಧಿಕಾರಿ ಡಾ.ಅಮೃತ್ ಹುಕ್ಕೆರಿ, ಡಿಹೆಚ್‌ಇಓ ಈಶ್ವರ ಹೆಚ್.ದಾಸಪ್ಪನವರ, ಡಿಡಿಎಮ್ ಲೋಕೇಶ್, ಡಿವೈಹೆಚ್‌ಇಓ ಬಸಯ್ಯ, ಜಿಲ್ಲಾ ಆಶಾ ಮೇಲ್ವಿಚಾರಕಿ ಶಾರೂನ್, ಬಿಹೆಚ್‌ಇಓ ಸರೋಜಾ ಕೆ, ಹಿರಿಯ ಹೆಚ್‌ಐಓ ಸುರೇಶ್, ಆಶಾ ಮೇಲ್ವಿಚಾರಕಿ ಮರಿಯಾಳಮ್ಮ ಸೇರಿದಂತೆ ಇತರರು ಇದ್ದರು.

## ಕಲ್ಮಠ ಗಾರಿಗೆ ಜಾತ್ರೆ ಅಂಗವಾಗಿ 21 ಜೋಡಿ ಸಾಮೂಹಿಕ ವಿವಾಹ

ಯುವಮಾರ್ಗ ಸುದ್ದಿ



**ಮಾನ್ವಿ,ಫೆ.16–** ಪಟ್ಟಣದ ಧ್ಯಾನ ಮಂದಿರದಲ್ಲಿ ಶಿವರಾತ್ರಿ ಅಂಗವಾಗಿ ಬೃಹತ್ ಶಿವಲಿಂಗದಲ್ಲಿನ ಕೋಟಿಲಿಂಗಗಳಿಗೆ ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಮಿಗಳ ನೇತೃತ್ವದಲ್ಲಿ ಅಭಿಷೇಕ ,ಬಿಲ್ವರ್ಚಾನೆ, ಮಹಾಮಂಗಳಾರತಿ, ನಡೆಯಿತು ಶಿವರಾತ್ರಿ ಅಂಗವಾಗಿ ಶಿವನಿಗೆ ಇಷ್ಟವಾದ ದ್ರಾಕ್ಷಿ,ಕರ್ಜುರ, ಕರ್ಬುಜ ಹಣ್ಣುಗಳನ್ನು ,ನೈವೆದ್ಯಾವಾಗಿ ಸಮರ್ಪಿಸಲಾಯಿತು.

ಬೃಹನ್ಮಠ ನೀಲಗಲ್ ಶ್ರೀ ಡಾ.ಪಂಚಾಕ್ಷರಿ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ 21 ಕ್ಕೂ ಹೆಚ್ಚು ಜೊಡಿಗಳ ಸಾಮೂಹಿಕ ವಿವಾಹಗಳು ನಡೆದವು.

ಕಾರ್ಯಕ್ರಮದಲ್ಲಿ ನೀಲಗಲ್ ಬೃಹನ್ಮಠದ ಅಭಿನವ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು , ರಾಯಚೂರು ಮಂಗಳವಾರ ಪೇಟೆಯ ಹಿರೇಮಠದ ವೀರಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಸೇರಿದಂತೆ ಇನ್ನಿತರರು ಇದ್ದರು.

## ಬೇಸಿಗೆಗೂ ಮುನ್ನ ಕುಡಿಯುವ ನೀರಿಗಾಗಿ ಹಾಹಾಕಾರ: ಚಿಕ್ಕಕೊಟ್ನೇಕಲ್ ಗ್ರಾಮಸ್ಥರಿಂದ ಗ್ರಾಪಂ ಕಚೇರಿಗೆ ಬೀಗ ಜಡಿದು ಪ್ರತಿಭಟನೆ

ಯುವಮಾರ್ಗ ಸುದ್ದಿ



**ಮಾನ್ವಿ,ಫೆ.16–** ತಾಲೂಕಿನ ಚಿಕ್ಕಕೊಟ್ನೇಕಲ್ ಗ್ರಾಮದ ನೂರಾರು ಜನರು ಗ್ರಾಮ ಪಂಚಾಯಿತಿಗೆ ಬೀಗ ಹಾಕಿ ಕುಡಿಯುವ ನೀರಿನ ಸಮರ್ಪಕ ಪೂರೈಕೆ ಮಾಡದೆ ಇರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಿದರು.

ಗ್ರಾಮದ ಮಹಿಳೆ ಬಸಮ್ಮ ಮಾತನಾಡಿ ಗ್ರಾಮ ಪಂಚಾಯಿತಿ ಯಿಂದ ಕಳೆದ ಒಂದು ತಿಂಗಳಿಂದ ಮನೆಗಳಿಗೆ ಕುಡಿಯುವ ನೀರು ಪೂರೈಕೆ ಮಾಡದೆ ಇರುವುದರಿಂದ ನಿತ್ಯ ಜೀವನ ನಡೆಸುವುದೆ ತೊಂದರೆಯಾಗಿದೆ, ನಿತ್ಯ 3 ಕಿ.ಮೀ.ದೂರ ಇರುವ ನಲ್ಗಂದಿನ್ನಿ ಗ್ರಾಮದ ಹಳ್ಳದಲ್ಲಿ ಬಟ್ಟೆ ತೋಳೆದು ಕೊಂಡು ಬರಬೇಕಾಗಿದೆ. ಕುಡಿಯುವ ನೀರನ್ನು 2 ಕಿ.ಮೀ.ದೂರದ ಉಮಳಿ ಹೊಸೂರು ಗ್ರಾಮದಿಂದ ತರಬೇಕಾಗಿದೆ ಅದು ವಿದ್ಯುತ್ ಇದ್ದರೆ ಮಾತ್ರ ನೀರು ಇಲ್ಲದೆ ಇದ್ದರು ವಿದ್ಯುತ್ ಬರುವ ವರೆಗೂ ಕಾಯಬೇಕಾಗಿದೆ. ಗ್ರಾಮದ ಒಂಟಿ ಮಹಿಳೆಯರು,ಬಣಂತಿಯರು,ಗರ್ಭಿಣಿಯರು, ವೃದ್ದರು ನೀರಿಗಾಗಿ ತೊಂದರೆ ಅನುಭವಿಸುವಂತಾಗಿದೆ. ದ್ವೀಚಕ್ರ ವಾಹನ ಇದ್ದವರಿಗೆ ಅಷ್ಟೆ ಬಳಸಲು ನೀರು ಎನ್ನುವಂತಾಗಿದೆ ಶಾಲೆಯ ಮಕ್ಕಳಿಗೆ ಅಗತ್ಯವಿರುವ ಬಳಕೆ ನೀರು,ಕುಡಿಯುವ ನೀರು ಇಲ್ಲದೆ ಶಾಲೆಯ ಮಕ್ಕಳು ತೊಂದರೆ ಅನುಭವಿಸುತ್ತಿದ್ದಾರೆ ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಅನೇಕ ಬಾರಿ ಕುಡಿಯುವ ನೀರಿನ ಪೂರೈಕೆ ಮಾಡುವಂತೆ ಮನವಿ ಮಾಡಿಕೊಂಡರು ಕೂಡ ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಗ್ರಾಮದ ನಿವಾಸಿ ರಮೇಶ ಭೋವಿ ಮಾತನಾಡಿ ಗ್ರಾಮದಲ್ಲಿ 700 ಕ್ಕೂ ಹೆಚ್ಚು ಮನೆಗಳಿದ್ದು, 3 ಸಾವಿರಕ್ಕೂ ಹೆಚ್ಚು ಜನರು ವಾಸವಿರುವ ಗ್ರಾಮಕ್ಕೆ ಹಾಕಿರುವ ಜೆ.ಜೆ.ಎಂ. ನಳ ಸಂಪರ್ಕ ಹೆಸರಿಗೆ ಮಾತ್ರ ಎನ್ನುವಂತಾಗಿದು ಇದುವರೆಗೂ ಒಂದು ಹನಿ ನೀರು ಕೂಡ ಬಂದಿಲ್ಲ ಗ್ರಾಮ ಪಂಚಾಯಿ ತಿಯಿಂದ ಕುಡಿಯುವ ನೀರಿಗಾಗಿ ಕೊಳವೆಬಾವಿ ಹಾಕಿದರು ಕೂಡ ಮೋಟರ್ ಸರಿಯಾದ ನಿರ್ವಾ ಣೆ ಇಲ್ಲದೆ ಇರುವುದರಿಂದ ಪದೆ ಪದೆ ದುರಸ್ಥಿಗೆ ಬರುತ್ತದೆ ಒಮ್ಮೆ ದುರಸ್ಥಿಗೆ ಬಂದರೆ 6 ತಿಂಗಳಾ ದರು ದುರಸ್ಥಿಯಾಗುವುದಿಲ್ಲ ಗ್ರಾಮ ಪಂಚಾಯಿತಿಗೆ ಕುಡಿಯುವ ನೀರು ಮತ್ತು ನೈರ್ಮಾಲ್ಯ ಅಧಿಕಾರಿ ಸತೀಶ್ ಅವರೆ ಆಡಳಿತಾಧಿಕಾರಿಯಾಗಿ ಬಂದಿದ್ದರು ಕೂಡ ಗ್ರಾಮದ ಜನರಿಗೆ ಕುಡಿಯುವ ನೀರು ದೊರೆಯುತ್ತಿಲ್ಲ ಎನ್ನುತ್ತಾರೆ.

ತಾಲೂಕಿನಲ್ಲಿ ಇನ್ನೂ ಬೇಸಿಗೆ ಕಾಲ ಬಂದಿಲ್ಲವಾದರೂ ಕೂಡ ನೀರಿಗಾಗಿ ಜನರು ಪರಿತಪಿಸುವಂತಾಗಿದೆ. ಗ್ರಾಮ ಪಂಚಾಯಿತಿಗಳಲ್ಲಿ ಜನಪ್ರತಿನಿಧಿಗಳ ಆಡಳಿತ ಕೊನೆಗೊಂಡು ಅಧಿಕಾರಿಗಳ ಆಡಳಿತ ಬಂದ ನಂತರವಂತು ಗ್ರಾಮದ ಜನರಿಗೆ ಹನಿ ನೀರಿಗೂ ಕೂಡ ಪರದಾಡುವಂತಾಗಿದೆ.

ಚಿಕ್ಕಕೊಟ್ನೇಕಲ್ ಗ್ರಾಮದಲ್ಲಿನ ಕೋಳವೆ ಬಾವಿಯಲ್ಲಿ ಅಳವಡಿಸಿರುವ ಮೋಟರ್ ಕೇಟುಹೊಗಿದ್ದು ದುರಸ್ಥಿ ಮಾಡಿಸಲಾಗುವುದು ಕೊಳವೇ ಬಾವಿಗೆ ಹೊಸ ಮೋಟರ್ ಕುಡಿಸುವುದಕ್ಕೆ ಪ್ರಸ್ಥವನೆ ಸಲ್ಲಿಸಲಾಗಿದ್ದು ಅನುಮೋದನೆ ದೊರೆತ ನಂತರ ಹೋಸ ಮೋಟರ್ ಅಳವಡಿಸಿ ಸಮರ್ಪಕವಾಗಿ ನೀರು ಪೂರೈಸುವುದಕ್ಕೆ ಕ್ರಮ ಕೈಗೊಳ್ಳಲಾಗುವುದು ಎನ್ನುತ್ತಾರೆ.

**–ಶಿವಗೇನಿ**

**ಚಿಕ್ಕಕೊಟ್ನೇಕಲ್ ಗ್ರಾಮ ಪಂಚಾಯಿತಿ ಅಭಿವೃದ್ದಿ ಅಧಿಕಾರಿ.**

ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ ಯೋಜನೆಯ ಅಡಿಯಲ್ಲಿ ಮಾನ್ವಿ ತಾಲ್ಲೂಕಿನ ಚಿಕ್ಕಕೊಟ್ನೇಕಲ್ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ವಿವಿಧ ಗ್ರಾಮಗಳಲ್ಲಿ ಜೆಜೆಎಮ್ ಯೋಜನೆಯ ಕಾಮಗಾರಿಯನ್ನು ಗುತ್ತಿಗೆದಾರರು ಹಾಗೂ ಅಧಿಕಾರಿಗಳು ಸೇರಿಕೊಂಡು ಕಳಪೆ ಮಟ್ಟದ ಕೆಲಸ ಮಾಡುವುದರೊಂದಿಗೆ ಕೋಟಿ ಕೋಟಿ ಹಣ ದುರ್ಬಳಕೆ ಮಾಡಿಕೊಂಡಿರುತ್ತಾರೆ. ಅಂಥವರ ವಿರುದ್ಧ ಮುಂದಿನ ದಿನಗಳಲ್ಲಿ ಕಾನೂನು ಹೋರಾಟಕ್ಕೂ ಸಿದ್ದರಾಗಿದ್ದೇವೆ.

**–ತಾಯಣ್ಣ ನಾಯಕ, ಚಿಕ್ಕಕೊಟ್ನೇಕಲ್**

ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂಬ ಉದ್ದೇಶದಿಂದ ಹತ್ತಾರು ಯೋಜನೆಗಳನ್ನು ರೂಪಿಸಿ ಜಾರಿಗೆ ತಂದಿದ್ದಾರೆ.ಆದರೆ ನದಿ ಪಾತ್ರದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹಾಗೆಯೇ ಉಳಿದುಕೊಂಡಿದೆ.

ಇನ್ನಾದರೂ ಜಿಲ್ಲಾ ಆಡಳಿತ ಎಚ್ಚೆತ್ತುಕೊಂಡ ನಮ್ಮ ಗ್ರಾಮಗಳಲ್ಲಿ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಜನರ ಸಮಸ್ಯೆಗಳ ಸ್ಪಂದಿಸದ ಪಿಡಿಓ ಶಿವಗೇನಿ ಅವರು ಸರಿಯಾಗಿ ಪಂಚಾಯಿತಿ ಬಾರದೇ ತಿಂಗಳಗೋಮ್ಮೆ ಪಂಚಾಯಿತಿಗೆ ಬಂದು ಎಲ್ಲಾ ದಿನಗಳ ಸಹಿ ಒಂದೆ ಬಾರಿ ಮಾಡಿ ಹೊರಟು ಹೋಗುವ ಪಿಡಿಓ ನಮಗೆ ಬೇಡ. ಸಾರ್ವಜನಿಕರುಓ ಸಮಸ್ಯೆಗಳ ಕುರಿತು ಕರೆ ಮಾಡಿದರೆ ಕರೆಯನ್ನು ಬಿಜಿ ಟೋನ್ಸೆ ಸೇರಿಸುವುದು ಅಥವಾ ಬ್ಲಾಕ್ ಲಿಸ್ಟಿಗೆ ಹಾಕುತ್ತಾರೆ.

ವಿವಿಧ ಗ್ರಾಮಗಳಲ್ಲಿ ಹಲವಾರು ಮೂಲ ಸಮಸ್ಯೆಗಳಿಂದ ನರಳುತ್ತಿದ್ದು ಸ್ಥಳದಲ್ಲಿದ್ದು ಯೋಜನೆಯನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರಬೇಕಾದ ಪಿಡಿಓ ಹಾಗೂ ಸಿಬ್ಬಂದಿಯವರು ಅನಧಿಕೃತವಾಗಿ ಗೈರು ಹಾಜರಾಗುತ್ತಿದ್ದರಿಂದ ಗ್ರಾಮಸ್ಥರಿಗೆ ದಿಕ್ಕು ತೋಚದಂತಾಗಿದೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಮೇಲಾಧಿಕಾರಿಗಳು ಇವರ ಮೇಲೆ ಸೂಕ್ತ ಕಾನೂನಿನ ಕ್ರಮ ಕೈಗೊಳ್ಳಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಗ್ರಾಮಸ್ಥರು ಸೇರಿ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಮುಂದೆ ಉಗ್ರವಾದ ಹೋರಾಟವನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು.

**–ಮೌಲಾಲಿ ನಾಯಕ ಚಿಕ್ಕಕೊಟ್ನೇಕಲ್ ಗ್ರಾಮಸ್ಥ**

ಮೊದಲನೇಯ ಪುಟದಿಂದ

# ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ತರಬೇತಿ ಕಾರ್ಯಾಗಾರ

ಸಂಸ್ಥೆ ಬೆಂಗಳೂರು ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ 4 ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.


ಪ್ರತಿಯೊಬ್ಬರು ಅನುಭವಿಸುತ್ತಿರುವ ಸ್ವಾತಂತ್ರ ವು ದೇಶದ ಸಂವಿಧಾನ ನೀಡಿರುವ ಅಧ್ಬುತ ಕೊಡುಗೆಯಾಗಿದೆ. ಇದರ ಜೊತೆಗೆ ವ್ಯಕ್ತಿಗೆ ಸಿಗಬೇಕಾದ ಸೌಲಭ್ಯ, ಮಾಹಿತಿ, ಸೇವೆಗಳನ್ನು ನೀಡಲು ನಿಯಮಿತ ಜವಾಬ್ದಾರಿ ಇರುತ್ತದೆ. ಇದನ್ನು ಒದಗಿಸಲು ಹಲವಾರು ಇಲಾಖೆಗಳು ಕಾರ್ಯನಿರ್ವಹಿಸುತ್ತಿವೆ. ಆದರೂ ಸಹ ಕೆಲವರಿಗೆ ಕಾನೂನು ಅರಿವಿನ ಕೊರತೆಯಿಂದ ಸೌಲಭ್ಯ, ಸೇವೆ ಪಡೆಯಲು ಆಗುತ್ತಿಲ್ಲ. ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸಿಗಬೇಕಾದ ಸಾಮಾನ್ಯ ಕಾನೂನಿನ ಜ್ಞಾನವನ್ನು ಒದಗಿಸಿ ಆತನನ್ನು ತೊಂದರೆಗಳಿಂದ ಪಾರು ಮಾಡುವ ಗುರುತರ ಜವಾಬ್ದಾರಿಯನ್ನು ಸ್ವಯಂ ಸೇವಕರು ತೆಗೆದುಕೊಳ್ಳಬೇಕು. ಸಮಾಜ ಸೇವೆ ಮಾಡುವ ಮನಸ್ಥಿತಿಯುಳ್ಳವರು ಮುಂದೆ ಬಂದಿರುವುದು ಶ್ಲಾಘನೀಯವಾಗಿದೆ ಎಂದರು.

ಇದಕ್ಕೂ ಮೊದಲು ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಗೌರವಾನ್ವಿತ ನ್ಯಾ.ಹೆಚ್.ಎ.ಸಾತ್ವಿಕ್ ಅವರು ಮಾತನಾಡಿ, ಸಾರ್ವಜನಿಕರಿಗೆ ಕಾನೂನುಗಳ ಸಲಹೆಗಳನ್ನು ಉಚಿತವಾಗಿ ನೀಡುವುದು ಈ ತರಬೇತಿಯ ಉದ್ದೇಶವಾಗಿದೆ. ಕೆಲವೊಂದು ಸಂದರ್ಭದಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ಸಹ ತೆಗೆದುಕೊಳ್ಳಲು ಸಾರ್ವಜನಿಕರಿಗೆ ಮಾಹಿತಿ ಗೊತ್ತಿರುವುದಿಲ್ಲ. ಅಂತವರಿಗೆ ಸರಿಯಾದ ಮಾಹಿತಿ ಸಲಹೆಗಳನ್ನು ಅರೆಕಾಲಿಕ ಸೇವಾ ಸ್ವಯಂ ಸೇವಕರು ನೀಡಿ, ಸರ್ಕಾರದ ವಿವಿಧ ಸೌಲಭ್ಯವನ್ನು ಒದಗಿಸಬೇಕೆಂದರು.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಮಾತನಾಡಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಬೇಕಾಗುವ ಅಗತ್ಯ ನೆರವುವನ್ನು ಆರೋಗ್ಯ ಇಲಾಖೆಯಿಂದ ನೀಡುವುದರ ಜೊತೆಗೆ ಪ್ರಾಥಮಿಕ ಆರೋಗ್ಯ ದಿಂದ ಜಿಲ್ಲಾ ಮಟ್ಟದ ವೈದ್ಯರಿಗೆ ಕಾನೂನು ಅರಿವು ನೀಡಲು ಶ್ರಮಿಸಲಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಕುಟುಂಬ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀಕಾಂತ್ ಎಸ್.ವಿ., ಬೆಂಗಳೂರಿನ ಔಟ್ ಲಾಡ್ ಇಂಡಿಯಾ ಸಂಸ್ಥೆಯ ವೆಂಕಟೇಶ ಎಚ್., ಜೋಮಿ ಜಾಯ್ ಸೇರಿದಂತೆ ಇತರರು ಇದ್ದರು. ವಕೀಲರಾದ ಮಾಲತಿ ಅವರು ನಿರೂಪಣೆ, ಸ್ವಾಗವನ್ನು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪನವರು, ವಂದನಾರ್ಪಣೆಯನ್ನು ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ನಿರ್ವಹಣೆ ಮಾಡಿದರು.

# ಪ್ರಥಮ ನೇತ್ರದಾನಿ ಶಿವಭಕ್ತ ಬೇಡರ ಕಣ್ಣಪ್ಪ ಜಯಂತಿಯನ್ನು ಸರಕಾರದಿಂದ ಆಚರಿಸುವಂತಾಗಲಿ–ರಘುವೀರ ನಾಯಕ



ಯುವಮಾರ್ಗ ಸುದ್ದಿ

**ರಾಯಚೂರು,ಫೆ.16–** ಪ್ರಪಂಚದ ಪ್ರಪ್ರಥಮ ನೇತ್ರದಾನಿ ಶಿವಭಕ್ತ ಬೇಡರ ಕಣ್ಣಪ್ಪ ಜಯಂತಿ ಕಾರ್ಯಕ್ರಮವನ್ನು
ಪ್ರತಿ ಶಿವರಾತ್ರಿಯಂದು ಸರಕಾರದ ವತಿಯಿಂದ ಆಚರಿಸಬೇಕೆಂದು ಎಂದು ಹೈದರಾಬಾದ್ ಕರ್ನಾಟಕ ಪ್ರದೇಶ ವಾಲ್ಮೀಕಿ ನಾಯಕ ಸಂಘದ ವಿಭಾಗೀಯ ಕಾರ್ಯದರ್ಶಿ ಎನ್.ರಘುವೀರ ನಾಯಕ ಮನವಿ ಮಾಡಿದರು.

ನಗರದ ಆಶಾಪೂರ ರಸ್ತೆಯಲ್ಲಿರುವ ಪರಿಶಿಷ್ಟ ಪಂಗಡದ ಬಾಲಕರ ವಸತಿ ನಿಲಯದಲ್ಲಿ ಶಿವರಾತ್ರಿಯ ಅಂಗವಾಗಿ ಸರಳವಾಗಿ ಹಮ್ಮಿಕೊಂಡಿದ್ದ ಬೇಡರ ಕಣ್ಣಪ ಜಯಂತಿ ಕಾರ್ಯಕ್ರಮದಲ್ಲಿ ಬೇಡರ ಕಣ್ಣಪ್ಪ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ಮಾತನಾಡಿದ ಅವರು ಪ್ರತಿಯೊಬ್ಬರು ತಮ್ಮ ಮರಣಾನಂತರ ಕಣ್ಣುಗಳನ್ನು ದಾನ ಮಾಡುವ ಮೂಲಕ ಅಂಧರ ಬಾಳಿಗೆ ಬೆಳಕಾಗಬೇಕು ಎಂದರು.

ಬೇಡರ ಕಣ್ಣಪ್ಪನ ಬಗ್ಗೆ ಇನ್ನು ಹೆಚ್ಚಿನ ಆಧ್ಯಯನಗಳು ನಡೆಯಬೇಕು. ಸರಕಾರವು ಪ್ರತಿ ವರ್ಷ ಶಿವರಾತ್ರಿದಿನದಂದು ಬೇಡರ ಕಣ್ಣಪ್ಪ ಜಯಂತಿಯನ್ನು ಆಚರಿಸುವಂತಾಗಬೇಕು ಎಂದು ಒತ್ತಾಯ ಮಾಡಿದರು.

ಪ್ರತಿಯೊಬ್ಬ ಯುವಕರು ಆಧ್ಯಯನದ ಕಡೆ ಹೆಚ್ಚು ಗಮನ ಹರಿಸಬೇಕು. ಪ್ರತಿಯೊಬ್ಬರು ತಮ್ಮ ಮರಣ ನಂತರ ಕಣ್ಣುಗಳನ್ನು ಮಣ್ಣು ಪಾಲಾಗಲು ಬಿಡದೆ ದಾನ ಮಾಡುವ ಮೂಲಕ ಅಂಧರ ಬಾಳು ಬೆಳಗಿಸಬೇಕು. ಬದುಕಿರುವಾಗಲೇ ತಮ್ಮ ಕಣ್ಣುಗಳನ್ನು ದಾನ ನೀಡಲು ಆಸ್ಪತ್ರೆಗೆ ಮಾಹಿತಿ ನೀಡಬೇಕು ಮತ್ತು ಕುಟುಂಬಸ್ಥರಿಗೂ ಮಾಹಿತಿ ನೀಡಬೇಕು ಎಂದು ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ಬೋಳಬಂಡಿ,ರಮೇಶ ನಾಯಕ, ನಿಲಯದ ಮೇಲ್ವಿಚಾರಕ ಮಾರೇಪ್ಪ,ಶಶಿ,ಭೀಮಣ್ಣ ಹಾಗೂ ನಿಲಯದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಫೆ. 21ರಂದು ಲಿಂಗಸೂಗೂರಿನಲ್ಲಿ ಹಳಗನ್ನಡ ಸಾಹಿತ್ಯ ಪರಂಪರೆ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ



ಯುವಮಾರ್ಗ ಸುದ್ದಿ

**ಲಿಂಗಸುಗೂರು,ಫೆ.16–** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಕಾರದೊಂದಿಗೆ ತಾಲೂಕು ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಫೆಬ್ರವರಿ 21, 2025ರಂದು ಬೆಳಿಗ್ಗೆ 10 ಗಂಟೆಗೆ ಲಿಂಗಸೂಗೂರು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ "ಹಳಗನ್ನಡ ಸಾಹಿತ್ಯ ಪರಂಪರೆ" ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ಶಾಸಕ ಮಾನಪ್ಪ ವಜ್ಜಲ್ ತಿಳಿಸಿದ್ದಾರೆ.

ಶನಿವಾರ ಸಂಜೆ ತಮ್ಮ ನಿವಾಸದಲ್ಲಿ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಕನ್ನಡ ಭಾಷೆಯ ಶ್ರೀಮಂತಿಕೆಗೆ ಆಧಾರವಾದ ಹಳಗನ್ನಡ ಸಾಹಿತ್ಯ ಪರಂಪರೆಯನ್ನು ಸ್ಮರಿಸಿ, ಅದರ ಮೌಲ್ಯಗಳನ್ನು ಹೊಸ ತಲೆಮಾರಿಗೆ ಪರಿಚಯಿಸುವ ಉದ್ದೇಶದಿಂದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಹಳಗನ್ನಡದ ಮಹತ್ವದ ಕೃತಿಗಳಾದ 'ವಡ್ಡಾರಾಧನೆ' ಕಥೆಗಳು, 'ಕವಿರಾಜಮಾರ್ಗ', 'ಶಬ್ದಮಣಿದರ್ಪಣ', ಜನ್ನನ 'ಯಶೋಧರ ಚರಿತೆ', 'ಪಂಪಭಾರತ', 'ಕುಮಾರವ್ಯಾಸ ಭಾರತ' ಸೇರಿದಂತೆ ವಿವಿಧ ಮೌಲಿಕ ವಿಷಯಗಳ ಕುರಿತು ನಾಡಿನ ಖ್ಯಾತ ವಿದ್ವಾಂಸರು ವಿಶೇಷ ಉಪನ್ಯಾಸಗಳನ್ನು ನೀಡಲಿದ್ದಾರೆ ಎಂದು ತಿಳಿಸಿದರು.

ತಾಲೂಕಿನ ಸಾಹಿತ್ಯಾಸಕ್ತರು, ವಿದ್ಯಾರ್ಥಿಗಳು, ಕನ್ನಡ ಅಧ್ಯಾಪಕರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಚುಟುಕು ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಡಾ. ಕೆ. ಶಶಿಕಾಂತ, ತಾಲೂಕು ಅಧ್ಯಕ್ಷ ದುರ್ಗಾಸಿಂಗ್, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಅನಂತದಾಸ, ಪದಾಧಿಕಾರಿಗಳಾದ ಅನಿಲಕುಮಾರ ಮಿಶ್ರಾ, ನಿರುಪಾದಿ ಖೈರವಾಡಗಿ, ಪ್ರಾಧ್ಯಾಪಕ ಭೀಮಸಿಂಗ್ ನಾಯ್ಕ್, ಶರಬಣ್ಣ ಹಾಗೂ ಕಲ್ಲೂರು ಮೂಕಾಂಬಿಕೆ ದೇವಸ್ಥಾನದ ಪ್ರಧಾನ ಅರ್ಚಕರು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ನಾಗೋಲಿ ಶ್ರೀಹನುಮಯ್ಯ ತಾತನವರ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜರುಗಿದ ರಥೋತ್ಸವ



ಯುವಮಾರ್ಗ ಸುದ್ದಿ

**ಅರಕೇರಾ,ಕಜ.16–**ತಾಲೂಕಿನ ಮಲ್ಲೇದೇವರ ಗುಡ್ಡ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿಬರುವ ನಾಗೋಲಿ ಗ್ರಾಮದ ಶ್ರೀಹ ನುಮಯ್ಯತಾತನವರ ಜಾತ್ರಾಮಹೋತ್ಸವ ಶಿವರಾತ್ರಿಯ ದಿನದಂದು ಪ್ರತಿವರ್ಷದಂತೆ ಜಾತ್ರಾ ಮಹೋತ್ಸವ ಕಾರ್ಯಕ್ರಮವು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಸೋಮವಾರ ಸಂಜೆ ಸಂಭ್ರಮದಿಂದ ಉತ್ಸವ ಹಾಗೂ ರಥೋತ್ಸವ ಜರುಗಿತು.

ನಾಗೋಲಿ ಗ್ರಾಮದ ಶ್ರೀ ಹನುಮಯ್ಯತಾತನವರ ಜಾತ್ರಾ ಮಹೋತ್ಸವ ಅಂಗವಾಗಿ ಉದಯ 8ಗಂಟೆಯಿಂದ 10 ಗಂಟೆಗೆಯವರೆಗೆ ಶ್ರೀ ಲಿಂ॥ ಹನುಮಯ್ಯ ತಾತನವರ ಕರ್ತೃ ಗದ್ದುಗೆ ಅಭಿಷೇಕ ಪತ್ರಿ ಪುಷ್ಪಾರ್ಚನೆ, ವಿಶೇಷಪೂಜೆ ಅಲಂಕಾರ ಮಾಡಿ ಮಂಗಳಾರತಿ,ತೀರ್ಥ ಪ್ರಸಾದ ನಂತರ 12.30 ಗಂಟೆಗೆ ಮುತ್ತೈದೆಯರ ಕಳಸ ಕನ್ನಡಿ ಭಾಜಾ ಭಜಂತ್ರಿಯೊಂದಿಗೆ ನಂದಿಕೋಲ ಸೇವೆ ಜರುಗಿತು.ಬೆಳಿಗ್ಗೆ 10 ಗಂಟೆಯಿಂದ ದೇವರಿಗೆ ವಿಶೇಷಪೂಜೆ ಕಾರ್ಯಕ್ರಮ ನಡೆದವು ಭಕ್ತರು ದೇವರಿಗೆ ಕಾಯಿ ಕರ್ಪೂರ ನೈವ್ಯದೆ ಸಲ್ಲಿಸಿ ದರ್ಶನಪಡೆದರು. ಸಂಜೆಯಾಗುತ್ತಿದ್ದಂತೆ ಭಕ್ತರು ಶ್ರೀಹನುಮಯ್ಯತಾತನವರರ ದೇವಸ್ಥಾನಕ್ಕೆ ಆಗಮಿಸಿದರು. ಜಾತ್ರೆ ಎಂದ ಮೇಲೆ ಅಲ್ಲೋಂದು ರಥೋತ್ಸವವೂ ಇರುವದು ವಿಶೇಷವೇನೂ ಇಲ್ಲ ಆದರೆ ನಾಗೋ ಲಿ ಗ್ರಾಮದ ಶ್ರೀ ಹನುಮಯ್ಯತಾತನವರ ಜಾತ್ರಾ ಮಹೋತ್ಸ ವದಲ್ಲಿ ಉಚ್ಚಾಯ ಮಹೋತ್ಸವದ ನೇತೃತ್ವವಹಿಸುವುದು ಮಹಿಳೆಯರು ಎಂಬುವದು ವಿಶೇಷವಾಗಿತ್ತು.

ಚನ್ನಬಸವ ತಾತನವರು ಸಂಜೆ 6ಗಂಟೆಗೆ ಮಹಿಳೆಯರಿಂದ ಉಚ್ಚಾಯ ಮಹೋತ್ಸವ ಜರುಗಿತು ನಂತರ ರಥೋತ್ಸವಕ್ಕೆ ಚಾಲನೆ ಸಿಗುತ್ತಿದ್ದಂತೆ ಭಕ್ತರು ರಥೋತ್ಸವಕ್ಕೆ ಬಾಳೆ,ಹಣ್ಣು ಉತ್ತುತ್ತಿ ಎಸೆದು ಭಕ್ತಿಭಾವ ಮೆರೆದರು. ರಥೋತ್ಸವ ಮುಂದೆವಿವಿಧ ವಾದ್ಯಮೇಳಗಳು ಗಮನಸೆಳೆಯಿತು, ರಥೋತ್ಸವ ಸ್ಥಳಕ್ಕೆ ಬಂದು ನಿಂತಾಗ ಭಕ್ತರು ಚಪ್ಪಾಳೆ ತಟ್ಟಿ ಹರ್ಷವ್ಯಕ್ತಪಡಿಸಿದರು.

ಸಂದರ್ಭದಲ್ಲಿ ಸ್ಥಳಿಯ ಗ್ರಾಮದ ಮುಖಂಡರು ಜನಪ್ರತಿನಿಧಿಗಳು ದೂರದ ರಾಜ್ಯದ ಆಂದ್ರ,ಮಹಾರಾಷ್ಟ್ರ ಸೇರಿದಂತೆ ರಾಯಚೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಸಾವಿರರಾರು ಜನ ಭಕ್ತಾಧಿಗಳು ಭಾಗವಹಿಸಿದ್ದರು.ಸಂದರ್ಭದಲ್ಲಿ ಚನ್ನಬಸವತಾತ, ಮಾಹಾಮುನಿತಾತ. ನಾಗವೀರಯ್ಯಸ್ವಾಮಿ ,ಸೋಮನಾಥಸ್ವಾಮಿ. ನಾಗೇಶಸ್ವಾಮಿ ಚನ್ನಬಸವನಾಯಕ ನಿವೃತ ಬ್ಯಾಂಕ್ ಅಧಿಕಾರಿ, ಪಂಪನಗೌಡ, ಪ್ರಭಣ್ಣಗೌಡ, ಹನುಮಯ್ಯ ಅಬಕಾರಿ, ಶಾಂತಪ್ಪಬಾಗ್ಲಿ, ಮುದಕಪ್ಪಬಾಗ್ಲಿ ಮಹಾದೇವ ಅಬಕಾರಿ, ಮುದಿ ರಂಗಪ್ಪನಾಯಕ, ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಜಾತ್ರಾ ಮಹೋತ್ಸವವದಲ್ಲಿ ಪಾಲುಗೊಂಡ ಭಕ್ತಾಧಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತು.

# ವಿಜಯನಗರ ಕಲಾಸಿರಿವಂತಿಗೆ ಸಾಕ್ಷಿಯಾದ ಜಾನಪದ ವಾಹಿನಿ ಅನಾವರ್ಣಗೊಂಡ ಕರ್ನಾಟಕದ ಸಾಂಸ್ಕೃತಿಕ ವೈಭವ

**ಹಂಪಿ(ಹೊಸಪೇಟೆ)ಫೆ16:** ಐತಿಹಾಸಿಕ ಹಂಪಿ ಉತ್ಸವದ ಮೂರನೇ ದಿನವಾದ ಭಾನುವಾರ ಗೋದೂಳಿಹೊತ್ತಿನಲ್ಲಿ ಜಾನಪದ ವಾಹಿನಿ ಮೆರವಣಿಗೆಯು ವರ್ಣರಂಜಿತವಾಗಿ ನಡೆಯಿತು.

ಹಂಪಿಯ ಶ್ರೀ ಉದ್ದಾನ ವೀರಭದ್ರೇಶ್ವರ ದೇವಸ್ಥಾನದ ಬಳಿಯಲ್ಲಿ ಮೆರವಣಿಗೆಗೆ ಶಾಸಕ ಹೆಚ್.ಆರ್.ಗವಿಯಪ್ಪ ಅವರು ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆಗೈದು ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದರು.
ಮುಂದೆ ರಾಜಗಾಂಭೀರ್ಯದಿಂದ ಲಕ್ಷ್ಮೀ ಆನೆಯು ಹೆಜ್ಜೆ ಹಾಕುತ್ತಿದ್ದರೆ ಹಿಂದೆ ಭುವನೇಶ್ವರಿ ದೇವಿ ಇದ್ದ ರಥ ಸಾಗುವ ಮೂಲಕ ಜಾನಪದ ವಾಹಿನಿಗೆ ಚಾಲನೆ ದೊರೆಯಿತು. ಕಣ್ಣು ಹಾಯಿಸಿದ ಕಡೆಯೆಲ್ಲಾ ಸಾರ್ವಜನಿಕರು ತಮ್ಮ ಮೊಬೈಲ್ ಮೂಲಕ ಫೋಟೋ ಮತ್ತು ವಿಡಿಯೋ ಚಿತ್ರೀಕರಣ ಮಾಡುವ ಮೂಲಕ ಸಂಭ್ರಮಿಸಿದರು.

ಮೆರವಣಿಗೆ ನಡೆಯುವ ರಾಜಬೀದಿಯುದ್ದಕ್ಕೂ ಎಲ್ಲೆಲ್ಲೂ ಮೊಳಗಿದ ಕಲಾ ತಂಡಗಳ ವೈಭವ ಸಾಂಪ್ರದಾಯಿಕ ವಾದ್ಯಗಳ ನಾದವೂ ಮಾರ್ಗದುದ್ದಕ್ಕೂ ಪ್ರತಿಧ್ವನಿಸಿತು. ಕಣ್ಣಿಗೆ ಮೊದನೀಡುವ ವೇಷ ಭೂಷಣ ತೊಟ್ಟ ಕಲಾ ತಂಡಗಳ ನೃತ್ಯ. ಸಂಭ್ರಮಿಸುತ್ತಿರುವ ಕಲಾ ಪ್ರೇಮಿಗಳು. ಮೆರವಣಿಗೆಯು ಉತ್ಸವಕ್ಕೆ ಆಗಮಿಸಿದ್ದ ಜನತೆಯ ಆಕರ್ಷಣೆಗೆ ಕಾರಣವಾಯಿತು. ವಿದೇಶಿ ಪ್ರವಾಸಿಗರು ಸಹ ಜಾನಪದ ಕಲೆಗಳಿಗೆ ಮನಸೋತು ಫೋಟೋ ಕ್ಲಿಕ್ಕಿಸುವ ಮೂಲಕ ಸಂಭ್ರಮದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತು.

ಜಾನಪದ ವಾಹಿನಿಯಲ್ಲಿ ಡೊಳ್ಳು ಕುಣಿತ, ನಾದಸ್ವರ, ಕಹಳೆ ವಾದ್ಯ, ಸಮಾಳ, ನಂದಿಧ್ವಜ, ಮಂಗಳವಾದ್ಯ, ಜೆಂಡೆವಾದ್ಯ,



ಸಿಂಗಾರಿ ಮೇಳ, ಕಂಸಾಳೆ, ಸುಡಗಾಡು ಕೈಚಳಕ ಚಮತ್ಕಾರ, ಸಂಸ್ಕೃತಿ ಜನಪದ ಕಲೆ, ಚಿಲಿಪಿಲಿಬೊಂಬೆ, ಹಲಗೆ ವಾದನ, ತಮಟೆ ವಾದನ, ಸೋಮನ ಕುಣಿತ, ಸಮಾಳ ಮತ್ತು ನಂದಿಕೋಲು, ಗಾರುಡಿ ಗೊಂಬೆ, ಕೋಲಾಟ, ನಗಾರಿ, ಹಂಪಾ ಪಟ್ಟಣ ಸುಡಗಾಡು, ಕೈಚಳಕ ಚಮತ್ಕಾರ, ಸಂಸ್ಕೃತಿ ಜಾನಪದ ಕಲೆ, ಮೋಹಿನಿ ಭಸ್ಮಾಸುರ ರೂಪಕ, ಹಗಲು ವೇಷ, ಕೀಲು ಕುದುರೆ, ಪೂಜಾ ಕುಣಿತ, ನಂದಿಧ್ವಜ ಮತ್ತು ಸಂಬಾಳ, ಹಲಗೆ ವಾದನ, ವೀರಗಾಸೆ, ಗೋಂಬೆಕುಣಿತ, ಚಿಲಿಪಿಲಿ ಗೊಂಬೆ, ವೀರಗಾಸೆ ಕಲಾ ಪ್ರಕಾರಗಳು ಮೆರವಣಿಗೆಗೆ ಮೆರಗು ನೀಡಿದವು.

ಹಂಪಿಯ ಉದ್ದಾನ ವೀರಭದ್ರೇಶ್ವರ ದೇವಸ್ಥಾನದಿಂದ ಆರಂಭವಾದ ಜಾನಪದ ವಾಹಿನಿ ಮೆರವಣಿಗೆಯು ಹಂಪಿಯ ಬಜಾರ್ ಮೂಲಕ ವಿರೂಪಾಕ್ಷೇಶ್ವರ ದೇವಸ್ಥಾನದವರೆಗೆ ವೈಭವದಿಂದ ಜರುಗಿತು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ರಾಯಚೂರು ಅಂಚೆ ಇಲಾಖೆಯಿಂದ ಉಳಿತಾಯ ಸಂಕಲ್ಪ ಅಭಿಯಾನ

**ರಾಯಚೂರು ಫೆ,16–:** ಅಂಚೆ ಇಲಾಖೆಯಿಂದ ಸಾರ್ವಜನಿಕರಿಗೆ ಉತ್ತಮ ಆದಾಯ ನೀಡುವ ವಿವಿಧ ಉಳಿತಾಯ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಬಳಸಿಕೊಳ್ಳುವಂತೆ ಜಾಗೃತಿ ಮೂಡಿಸಲು ಹಾಗೂ ಅಂಚೆ ಕಚೇರಿಗಳ ಉಳಿತಾಯ ಮತ್ತು ಹೂಡಿಕೆ ಯೋಜನೆಗಳಿಗೆ ಉತ್ತೇಜನ ನೀಡಲು ಉಳಿತಾಯ ಸಂಕಲ್ಪ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ.

ಭಾರತ ಸರ್ಕಾರದ ಭರವಸೆಯೊಂದಿಗೆ ಅಂಚೆ ಕಚೇರಿ ಉಳಿತಾಯ ಬ್ಯಾಂಕ್ (ಪಿಓಎಸ್‌ಬಿ) ಸಾರ್ವಜನಿಕರಿಗೆ ಸುರಕ್ಷಿತ ಮತ್ತು ವಿಶ್ವಾಸಾರ್ಹ ಉಳಿತಾಯ ಹಾಗೂ ಹೂಡಿಕೆ ಯೋಜನೆಗಳನ್ನು ಒದಗಿಸುತ್ತಿದೆ. ಅಂಚೆ ಕಚೇರಿಗಳ ವಿವಿಧ ಉಳಿತಾಯ ಮತ್ತು ಹೂಡಿಕೆ ಯೋಜನೆಗಳಲ್ಲಿ ಹೂಡಿಕೆ ಮಾಡುವ ಮೂಲಕ ಗ್ರಾಹಕರು ತಮ್ಮ ಹೂಡಿಕೆಯ ಮೇಲೆ ನಿಯಮಿತ ಬಡ್ಡಿ ಹಾಗೂ ನಿರಂತರ ಆದಾಯವನ್ನು ಪಡೆಯಬಹುದು.ಈ ಯೋಜನೆಗಳು ದೇಶದ ಎಲ್ಲಾ ಅಂಚೆ ಕಚೇರಿಗಳಲ್ಲಿ, ವಿಶೇಷವಾಗಿ ಗ್ರಾಮೀಣ ಹಾಗೂ ದೂರದ ಪ್ರದೇಶಗಳಲ್ಲಿಯೂ ಲಭ್ಯವಿವೆ. ಇದಲ್ಲದೆ, ಗ್ರಾಹಕರು ಎಟಿಎಂ, ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ನೆಫ್ಟ್ ಹಾಗೂ ಆರ್‌ಟಿಜಿಎಸ್ ಸೇರಿದಂತೆ ಆಧುನಿಕ ಬ್ಯಾಂಕಿಂಗ್ ಸೌಲಭ್ಯಗಳನ್ನು ಸಹ ಉಪಯೋಗಿಸಬಹುದು.ಉಳಿತಾಯ ಖಾತೆ ಹೊಂದಿರುವ ಗ್ರಾಹಕರು ಕಡಿಮೆ ಪ್ರೀಮಿಯಂನಲ್ಲಿ ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ (ಪಿಎಂಎಸ್‌ಬಿವೈ) ಹಾಗೂ ಪ್ರಧಾನಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ(ಪಿಎಂಜೆಜೆಬಿವೈ) ಗಳಲ್ಲಿ ನೋಂದಾಯಿಸಿಕೊಂಡು ಅನಿರೀಕ್ಷಿತ ಸಂದರ್ಭಗಳಲ್ಲಿ ತಮ್ಮ ಕುಟುಂಬಕ್ಕೆ ಅಗತ್ಯವಾದ ಆರ್ಥಿಕ ಭದ್ರತೆಯನ್ನು ಒದಗಿಸಬಹುದು.

ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಆರ್ಥಿಕ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಇಂಡಿಯಾ ಪೋಸ್ಟ್ ಇದೀಗ ಉಳಿತಾಯ ಸಂಕಲ್ಪ ಅಭಿಯಾನವನ್ನು ಜಾರಿಗೊಳಿಸಿದೆ. ಎಲ್ಲಾ ನಾಗರಿಕರು ತಮ್ಮ ಹತ್ತಿರದ ಅಂಚೆ ಕಚೇರಿಗೆ ಭೇಟಿ ನೀಡಿ ಹೊಸ ಉಳಿತಾಯ ಖಾತೆ ತೆರೆಯುವಂತೆ ಹಾಗೂ ಅಂಚೆ ಕಚೇರಿಗಳ ವಿವಿಧ ಯೋಜನೆಗಳಲ್ಲಿ ಹೂಡಿಕೆ ಮಾಡಿ ನಿಯಮಿತ ಮತ್ತು ನಿರಂತರ ಆದಾಯ ಪಡೆಯುವಂತೆ ವಿನಂತಿಸಲಾಗಿದೆ. ಈ ಅಭಿಯಾನವನ್ನು ಯಶಸ್ವಿಗೊಳಿಸಲು ಸಾರ್ವಜನಿಕರು ಸಹಕರಿಸಬೇಕು ಎಂದು ರಾಯಚೂರು ವಿಭಾಗೀಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವ ಮಾರ್ಗ

www.yuvamarga.com Yuva Marga yuva_marga_

# ಕೋರ್ಟ್‌ಗಳಿಗೆ ಹುಸಿ ಬಾಂಬ್ ಬೆದರಿಕೆ

**ಬೆಂಗಳೂರು,ಫೆ.16–** ಧಾರವಾಡ,ಕೊಡಗು, ದಾವಣಗೆರೆ,ಹಾಸನ,ಉತ್ತರ ಕನ್ನಡ, ಸೇರಿ ರಾಜ್ಯದ ವಿವಿಧ ಜಿಲ್ಲೆಗಳ ನ್ಯಾಯಾಲಯಗಳಿಗೆ ಬಂದ ಬಾಂಬ್ ಬೆದರಿಕೆ ಸಂದೇಶವು ತಪಾಸಣೆಯಲ್ಲಿ ಹುಸಿಯಾಗಿದ್ದು,ನಿಟ್ಟುಸಿರು ಬಿಡುವಂತಾಗಿದೆ.

ಧಾರವಾಡ ಹೈಕೋರ್ಟ್ ಪೀಠ,ದಾವಣಗೆರೆ, ಮಡಿಕೇರಿ,ಹಾಸನ, ಉತ್ತರ ಕನ್ನಡ ಸೇರಿ ಕೆಲ ಜಿಲ್ಲಾ ನ್ಯಾಯಾಲಯಗಳಿಗೆ ಇಂದು ಬೆಳಿಗ್ಗೆ ಕಿಡಿಗೇಡಿಗಳು ಬಾಂಬ್ ಬೆದರಿಕೆ ಇ-ಮೇಲ್ ಸಂದೇಶ ಕಳುಹಿಸಿದ್ದು,ಕೆಲ ಆತಂಕಕ್ಕೆ ಎಡೆಮಾಡಿಕೊಟ್ಟಿತ್ತು.

ಇ-ಮೇಲ್ ಮೂಲಕ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಸಂದೇಶವನ್ನು ದುಷ್ಕರ್ಮಿಗಳು ಕಳುಹಿಸುವುದು ಪತ್ತೆಯಾದ ತಕ್ಷಣವೇ ನ್ಯಾಯಾಲಯಗಳಿಂದ ವಕೀಲರು ಸಿಬ್ಬಂದಿ ಕಕ್ಷಿದಾರರು ಸೇರಿ ಎಲ್ಲರೂ ಹೊರಬಂದಿದ್ದಾರೆ.

ಶ್ವಾನದಳ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಪೊಲೀಸರು ತಪಾಸಣೆ ನಡೆಸಿದಾಗ ಹುಸಿ ಎನ್ನುವುದು ಕಂಡುಬಂದಿದ್ದು,ತಪಾಸಣೆ ಬಳಿಕ ಮತ್ತೆ ನ್ಯಾಯಾಲಯದ ಕಾರ್ಯ ಕಲಾಪಗಳು ಎಂದಿನಂತೆ ಅರಂಭಗೊಂಡಿವೆ.

ಹೈಕೋರ್ಟ್ ಪೀಠಕ್ಕೆ ಬೆದರಿಕೆ: ಧಾರವಾಡ ಹೈಕೋರ್ಟ್ ಪೀಠ ಹಾಗೂ ಜಿಲ್ಲಾ ನ್ಯಾಯಾಲಯಕ್ಕೆ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಬಂದಿದೆ.ಕೂಡಲೇ ಕೋರ್ಟ್ ಸಿಬ್ಬಂದಿ ಹಾಗೂ ವಕೀಲಯರನ್ನ ಹೊರಗೆ ಕಳುಹಿಸಿದ್ದು, ಬಳಿಕ ಧಾರವಾಡ ಗರಗ ಠಾಣಾ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.ತಕ್ಷಣವೇ




ಕೋರ್ಟ್ ಆವರಣಕ್ಕೆ ದೌಡಾಯಿಸಿದ ಅಗ್ನಿಶಾಮಕ ಸಿಬ್ಬಂದಿ ಎಸ್ಪಿ ಗುಂಜನ್ ಆರ್ಯ ನೇತೃತ್ವದಲ್ಲಿ ಶೋಧ ನಡೆಸಿದಾಗ ಹುಸಿ ಸಂದೇಶ ಎನ್ನುವುದು ಪತ್ತೆಯಾಗಿದೆ.

ಒಂದು ತಿಂಗಳ ಹಿಂದೆ ಇದೇ ರೀತಿ ಸ್ಫೋಟಿಸುವುದಾಗಿ ಈ ಮೇಲ್ ಸಂದೇಶ ಬಂದಿದ್ದು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಭದ್ರತೆಯನ್ನು ಹೆಚ್ಚಿಸಲಾಗಿತ್ತು.ಜಿಲ್ಲಾ ಕೋರ್ಟ್‌ಗೆ ಬೆದರಿಕೆ. ದಾವಣಗೆರೆ ಜಿಲ್ಲಾ ನ್ಯಾಯಾಲಯಕ್ಕೂ ಅಪರಿಚಿತ ಇ-ಮೇಲ್ ವಿಳಾಸದಿಂದ ಬಾಂಬ್ ಬೆದರಿಕೆ ಬಂದಿದೆ. ಇಂದು ಮಧ್ಯಾಹ್ನ 12:30ರ ಹೊತ್ತಿಗೆ ಆರ್‌ಡಿಎಕ್ಸ್ ಸ್ಫೋಟವಾಗಲಿದೆ ಎಂಬ ಸಂದೇಶ ಬಂದಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಕಲಾಪಗಳನ್ನು ಸ್ಥಗಿತಗೊಳಿಸಲಾಗಿದೆ.

ಮಾಹಿತಿ ಪಡೆದ ಪೊಲೀಸರು ಕೂಡಲೇ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದೊಂದಿಗೆ ಸ್ಥಳಕ್ಕೆ ಧಾವಿಸಿ ತಪಾಸಣೆ ನಡೆಸಿದ್ದಾರೆ. ಪ್ರಾಥಮಿಕ ಮಾಹಿತಿ ಪ್ರಕಾರ ಇ-ಮೇಲ್ ವಿಳಾಸ ತಮಿಳುನಾಡಿನಲ್ಲಿ ಪತ್ತೆಯಾಗಿದೆ.ಕೆಲಕಾಲ ಕೋರ್ಟ್‌ನಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ.


ಹಾಸನ ಕೋರ್ಟ್ ಗೆ ಬೆದರಿಕೆ: ಹಾಸನದ ಜಿಲ್ಲಾ ನಾಯಾಲಯಕ್ಕೆ ಬಾಂಬ್ ಬೆದರಿಕೆ ಇ-ಮೇಲ್ ಬಂದಿದ್ದು, ಹಾಸನ ನಗರ ಠಾಣೆ ಪೊಲೀಸರು ತಪಾಸಣೆ ಕೈಗೊಂಡಿದ್ದಾರೆ. ಕೋರ್ಟ್ ಸಿಬ್ಬಂದಿ, ವಕೀಲರನ್ನ ಆವರಣದಿಂದ ಹೊರಗೆ ಕಳಿಸಿದ್ದು, ತೀವ್ರ ತಪಾಸಣೆ ನಡೆಸಲಾಗುತ್ತಿದೆ. ಪಾರ್ಕಿಂಗ್, ಕೋರ್ಟ್ ಆವರಣ, ಒಳಾಂಗಣಗಳಲ್ಲಿ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳ ತಪಾಸಣೆ ನಡೆಸುತ್ತಿವೆ.

ಮಡಿಕೇರಿಯಲ್ಲಿ ಬೆದರಿಕೆ: ಮಡಿಕೇರಿ ನ್ಯಾಯಾಲಯಕ್ಕೂ ಕೂಡ ಕಿಡಿಗೇಡಿಗಳು ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದಾರೆ. ನ್ಯಾಯಲಯದಲ್ಲಿ ಬಾಂಬ್ ಇಟ್ಟಿರುವುದಾಗಿ ಇಮೇಲ್ ಸಂದೇಶ ಬಂದಿದೆ ನ್ಯಾಯಾಲಯದ ಅಧಿಕೃತ ಇಮೇಲ್ ಐಡಿಗೆ ಈ ಒಂದು ಸಂದೇಶ ಬಂದಿದೆ

ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ನ್ಯಾಯಾಲಯದ ಕಲಾಪವನ್ನು ಸ್ಥಗಿತಗೊಳಿಸಿ ಸಂಕೀರ್ಣದ ಪ್ರತಿಯೊಂದು ಭಾಗವನ್ನೂ ಸೂಕ್ಷ್ಮವಾಗಿ ತಪಾಸಣೆ ನಡೆಸುತ್ತಿರುವ ಪೊಲೀಸರು ಅನುಮಾನಾಸ್ಪದ ವಸ್ತುಗಳ ಶೋಧ ನಡೆಸುತ್ತಿದ್ದಾರೆ. ಅಲ್ಲದೇ ಬೆದರಿಕೆ ಬಂದ ಇ-ಮೇಲ್ ಮೂಲ ಪತ್ತೆ ಹಚ್ಚಲು ತನಿಖೆ ಆರಂಭಿಸಿದ್ದಾರೆ.

# ಸಂತ ಸೇವಾಲಾಲರ ಆದರ್ಶ ಅಳವಡಿಸಿಕೊಳ್ಳಲು ಕರೆ



**ಲಕ್ಷ್ಮೇಶ್ವರ,ಫೆ16–** ಪಟ್ಟಣದ ತಹಶಿಲ್ದಾರ ಕಚೇರಿಯಲ್ಲಿ ಸಂತ ಸೇವಾಲಾಲರ ಜಯಂತಿ ಆಚರಿಸಲಾಯಿತು.ಸಂತ ಸೇವಾಲಾಲ್ ಮಹಾರಾಜರ ಭಾವಚಿತ್ರಕ್ಕೆ ತಹಶಿಲ್ದಾರ ಧನಜಂಯ ಎಂ. ಮತ್ತು ಬಂಜಾರ ಸಮಾಜದ ಮುಖಂಡರು ಪುಷ್ಪಾರ್ಚನೆ ಮಾಡಿದರು.

ಬಳಿಕ ಮಾತನಾಡಿದ ತಹಶೀಲ್ದಾರ್ ಧನಂಜಯ ಎಂ ಅವರು ಸೇವಾಲಾಲರ ಆದರ್ಶವನ್ನು ಪ್ರತಿಂಯೊಬ್ಬರೂ ಅಳವಡಿಸಿಕೊಳ್ಳಬೇಕು. ನಿರಂತರವಾಗಿ ಅವರನ್ನು ಸ್ಮರಿಸಬೇಕು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕು' ಎಂದರು.

ಮುಖಂಡರುಗಳಾದ ದೀಪಕ ಲಮಾಣಿ, ಥಾವರಪ್ಪ ಲಮಾಣಿ, ರಾಮಣ್ಣ ಲಮಾಣಿ ಮಾತನಾಡಿ, ಸಂತರು, ಶರಣರು ನಡೆದಾಡಿದ ಭಾರತ ದೇಶ ಸಂಸ್ಕಾರದ ಕಾರಣಕ್ಕೆ ಜಗತ್ತಿಗೆ ಹೆಸರು ವಾಸಿವಾಗಿದೆ. ಅಂಥ ಮಹಾನ್ ವ್ಯಕ್ತಿಗಳ ಜಯಂತಿಯನ್ನು ನಾವುಗಳು ಕೇವಲ ಆಚರಣೆಗೆ ಮಾತ್ರ ಸಿಮೀತ ಮಾಡಬಾರದು ಎಂದು ಹೇಳಿದರು. ಸಂತ ಸೇವಾಲಾಲ್ ಮಹಾರಾಜರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು.

ಶರಣರ, ಸಂತರ ಸಂದೇಶಗಳು ಶಾಂತಿ, ಸಾಮರಸ್ಯದ ನಾಡು ಕಟ್ಟಬೇಕೆಂಬುದಾಗಿದೆ. ತತ್ವ-ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಜಯಂತಿ ಆಚರಣೆಗೆ ಅರ್ಥ ಬರುತ್ತದೆ. ಸರ್ಕಾರಿ ಸೌಲಭ್ಯಗಳನ್ನು ಸರಿಯಾಗಿ ಸದುಪಯೋಗ ಪಡಿಸಿಕೊಂಡು ಸಮಾಜದವರು ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ , ಗ್ರೇಡ್ 2 ತಹಶಿಲ್ದಾರ ಮಂಜುನಾಥ ಅಮಾಸಿ, ವೈದ್ಯಾಧಿಕಾರಿ ಶ್ರೀಕಾಂತ್ ಕಾಟೇವಾಲ್, ದೀಪಕ ಲಮಾಣಿ, ರಾಮಣ್ಣ ಲಮಾಣಿ, ಗಣೇಶ ಲಮಾಣಿ, ಧರ್ಮಣ್ಣ ಲಮಾಣಿ, ಗಣೇಶ ಲಮಾಣಿ, ಕೀರಣ ಲಮಾಣಿ, ತುಕಾರಾಮ ಪೂಜಾರ, ಗೇಮಪ್ಪ ಲಮಾಣಿ,ಶೇಖಪ್ಪ ಲಮಾಣಿ, ಸುರೇಶ ಮಾಳಗಿಮನಿ, ಪರಮೇಶ ಲಮಾಣಿ, ಮಂಜುನಾಥ ವಾಲ್ಮೀಕಿ, ಶ್ರೀಕಾಂತ, ಪ್ರವೀಣ ಬೋಮಲೆ ಭೀಮಣ್ಣಣ ಯಂಗಾಡಿ ಉಪತಾಹಸಿಲ್ದಾರ ಸಂತೋಷ ಕಂದಾಯ ನಿರೀಕ್ಷಕ ನದಾಫ್ ಹಾಗೂ ಸಿಬ್ಬಂದಿ ವರ್ಗದವರು ಇದ್ದರು.

# ಫೆ.20 ರಂದು ಅಸ್ಪೃಶ್ಯತಾ ನಿರ್ಮೂಲನಾ ವಿಚಾರಗೋಷ್ಠಿ ; ಯಲ್ಲಪ್ಪ ದೊಡ್ಡಮನಿ

**ಅಫಜಲಪುರ: ಫೆ.16–**ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕಲಬುರಗಿ ಹಾಗೂ ಸಾಮ್ರಾಟ್ ಅಶೋಕ ಚಾರಿಟೇಬಲ್ ಟ್ರಸ್ಟ್, ಮಲ್ಲಾಬಾದ ಇವರ ಸಂಯುಕ್ತ ಆಶ್ರಯದಲ್ಲಿ 2025-26ನೇ ಸಾಲಿನ ಅಸ್ಪೃಶ್ಯತಾ ನಿರ್ಮೂಲನಾ ವಿಚಾರಗೋಷ್ಠಿ, ಕಾರ್ಯಗಾರ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮವು ಫೆ. 20ರಂದು ಅಫಜಲಪುರ ಪಟ್ಟಣದ ತಹಸೀಲ ಕಚೇರಿ ಎದುರುಗಡೆಯಿರುವ ಸರಕಾರಿ ಪ್ರೌಢ ಶಾಲೆ ಆವರಣದ ಗುರುಭವನದಲ್ಲಿ ಮುಂಜಾನೆ 10:30 ಗಂಟೆಗೆ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಯಲ್ಲಪ್ಪ ದೊಡ್ಡಮನಿ ತಿಳಿಸಿದರು.

ಕಾರ್ಯಕ್ರಮವನ್ನು ಶಾಸಕ ಎಂ.ವೈ. ಪಾಟೀಲ ಉದ್ಘಾಟಿಸಲಿದ್ದು, ಪೋಟೋಯಳ ಪೂಜೆಯನ್ನು ಮಾಜಿ ಸಚಿವ ಮಾಲಿಕಯ್ಯ ವಿ. ಗುತ್ತೇದಾರ ನೆರವೇರಿಸಲಿದ್ದಾರೆ. ಸಂವಿಧಾನ ಪ್ರಸ್ತಾವನೆ ಬಿಡುಗಡೆ ಕಾರ್ಯಕ್ರಮವನ್ನು ಮಾಜಿ ಜಿ.ಪಂ. ಅಧ್ಯಕ್ಷ ನಿತೀನ್ ವಿ. ಗುತ್ತೇದಾರ ನಡೆಸಲಿದ್ದು, ಕ.ಪ್ರ ಪ್ರಕಟಣೆಯನ್ನು ಕ.ಕ.ರ.ಸಾ. ಸಂಸ್ಥೆ ಕಲಬುರಗಿ ಅಧ್ಯಕ್ಷ ಅರಣಕುಮಾರ ಎಂ. ಪಾಟೀಲ ಬಿಡುಗಡೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಪ್ರೀತಿ ದೊಡ್ಡಮನಿ, ತಹಶೀಲ್ದಾರ ಹಾಗೂ ತಾಲೂಕು ದಂಡಾಧಿಕಾರಿ ಸಂಜುಕುಮಾರ ದಾಸರ್, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ವೀರಣ್ಣ ಕೌಲಗಿ, ತಾ.ಸ.ಕ.ಇ. ಸಹಾಯಕ ನಿರ್ದೇಶಕರು ಅಶೋಕ ನಾಯಕ್, ಕ್ಷೇತ್ರ ಶಿಕ್ಷಣಾಧಿಕಾರಿ ಇರ್ಪಣ್ಣ ಗುಡಮಿ, ಪುರಸಭೆ ಮುಖ್ಯಾಧಿಕಾರಿ ಫಕ್ರೋದ್ದೀನ್, ಸಿ.ಪಿ.ಐ. ಚನ್ನಯ್ಯ ಹಿರೇಮಠ, ಪಿ.ಎಸ್.ಐ. ಸೋಮಲಿಂಗ ಒಡೆಯರ್, ಕೋಲಿ ಕಬ್ಬಲಿ ಎಸ್.ಟಿ. ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಲಚ್ಚಪ್ಪ ಜಮಾದಾರ, ಸಮಾಜ ಸೇವಕ ಜೆ.ಎಂ. ಕೊರಬು ಹಾಗೂ ಯುವ ಮುಖಂಡ ರವಿ ಶೆಟ್ಟಿ ಭಾಗವಹಿಸಲಿದ್ದಾರೆ.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಟ್ರಸ್ಟ್ ಅಧ್ಯಕ್ಷ ಯಲ್ಲಪ್ಪ ಭಾ. ದೊಡ್ಡಮನಿ ವಹಿಸಲಿದ್ದಾರೆ. ಸಮಾಜದಲ್ಲಿ ಸಮಾನತೆ, ಬಾಂಧವ್ಯ ಹಾಗೂ ಅಸ್ಪೃಶ್ಯತಾ ನಿರ್ಮೂಲನೆಯ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಟ್ರಸ್ಟ್ ಅಧ್ಯಕ್ಷ ಯಲ್ಲಪ್ಪ ದೊಡ್ಡಮನಿ ಪ್ರಕಟಣೆಯಲ್ಲಿ ಕೋರಿದ್ದಾರೆ.

# ಪ್ರಸ್ತುತ ಸಮಾಜಕ್ಕೆ ಶ್ರೀ ಸೇವಾಲಾಲ ಮಹಾರಾಜರ ತತ್ವಾಚರಣೆ ಅಗತ್ಯ ; ಅರುಣಕುಮಾರ ಪಾಟೀಲ



**ಅಫಜಲಪುರ:ಫೆ.16–** ಸಮಾಜಕ್ಕೆ ಆದರ್ಶ ತತ್ವಗಳು ಸಾರಿದ ಸಂತ ಶ್ರೀ ಸೇವಾಲಾಲ ಮಹಾರಾಜರು ಸಮಾಜಕ್ಕೆ ಅಮೋಘ ಕೊಡುಗೆ ನೀಡಿದ್ದಾರೆ ಅವರ ತತ್ವಾಚರಣೆಯಿಂದ ಸುಂದರ ಸಮಾಜ ಕಟ್ಟಲು ಸಹಕಾರಿಯಾಗಲಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ ಪಾಟೀಲ ಹೇಳಿದರು.

ಪಟ್ಟಣದ ತಹಸೀಲ ಕಚೇರಿಯಲ್ಲಿ ತಾಲೂಕು ಆಡಳಿತ ವತಿಯಿಂದ ಆಯೋಜಿಸಲಾದ ಸಂತ ಶ್ರೀ ಸೇವಾಲಾಲ ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಸಮಾಜದಲ್ಲಿ ಪರಸ್ಪರ ಸೌಹಾರ್ದತೆಯಿಂದ ಬದುಕು ಮಾಡಲು ಹೇಳಿಕೊಟ್ಟ ಮಹಾನ್ ಸಮಾಜ ಸುಧಾರಕ ಸೇವಾ ಲಾಲ್ ಆಗಿದ್ದಾರೆ. ಬಂಜಾರ ಸಮುದಾಯದ ಮುಖಂಡರು ಸಂಘಟಿತರಾಗಿ, ಶಿಕ್ಷಣವಂತ ರಾಗಬೇಕು ಎಂದು ಪಾಟೀಲ ತಿಳಿಸಿದರು.ತಹಸೀಲ್ದಾರ ಸಂಜೀವಕುಮಾರ ದಾಸರ ಮಾತನಾಡಿ, ಸಂತ ಶ್ರೀ ಸೇವಾಲಾಲ್ ಮಹಾರಾಜರು ನಮಗೆಲ್ಲ ಆದರ್ಶವಾಗಿದ್ದಾರೆ. ಸೂರ್ಯ ಚಂದ್ರ ಇರುವವರೆಗೂ ಮಹಾರಾಜರ ತತ್ವಗಳು ನಮಗೆ ಆದರ್ಶವಾಗ ಲಿವೆ. ಎಲ್ಲರೂ ಅವರ ಆದರ್ಶಗಳನ್ನು ಅನುಸರಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮವು ಶ್ರೀ ನವ ಶಕ್ತಿ ಪುಣ್ಯಾಶ್ರಮ ಶಕ್ತಿಪೀಠ ಚೌಡಾಪೂರದ ಪೂಜ್ಯ ಶ್ರೀ ಮುರಾಹರಿ ಮಹಾರಾಜರು, ಲಾಡ ಚಿಂಚೋಳಿ ಶ್ರೀ ಸುನೀಲ ಮಹಾರಾಜರು ಹಾಗೂ ಶ್ರೀ ಶಂಕರ ಪೂಜಾರಿ ಸಾನಿಧ್ಯದಲ್ಲಿ ನಡೆಯಿತು.

ಈ ಸಂಧರ್ಭದಲ್ಲಿ ಮುಖಂಡರಾದ ರಮೇಶ ಪೂಜಾರಿ, ಶಿವಾನಂದ ಗಾಡಿ ಸಾಹುಕಾರ, ಬಂಜಾರಾ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಅಪ್ಪು ಬಿ.ರಾಠೋಡ, ನಾಥರಾಮ

ಎಲ್.ರಾಠೋಡ, ರಾಕೇಶ ಟಿ.ರಾಠೋಡ, ಶಂಕರ ದಾಮುಲು ರಾಠೋಡ, ಸುಭಾಷ ಸಿ. ರಾಠೋಡ, ತಾರು ಎಚ್.ಜಾಧವ, ಶ್ರೀಧರ ಡಿ. ರಾಠೋಡ, ವಿನೋದ ಎಂ.ರಾಠೋಡ, ಪ್ರೀತಮ್ ರಾಠೋಡ, ಮೇಘು ಆರ್.ಚವ್ಹಾಣ, ವಿನೋದ ಚವ್ಹಾಣ, ವಿಜಯಕುಮಾರ ಎಂ.ರಾಠೋಡ, ಸುನೀಲ ರಾಠೋಡ, ರಾಜಕುಮಾರ ಪವಾರ, ಉಪನ್ಯಾಸಕ ಸುರೇಶ ಎಸ್.ರಾಠೋಡ, ರಾಜಕುಮಾರ ಚವ್ಹಾಣ, ಕವಿತಾ ರಾಠೋಡ, ಕಸಾಪ ಅಧ್ಯಕ್ಷ ಪ್ರಭಾವತಿ ಮೇತ್ರೆ, ರಾಘವೇಂದ್ರ ರಾಠೋಡ, ಪುನ್ನು ಡಿ. ಪವಾರ, ಕೇಶು ಆರ್.ಜಾಧವ್, ಶಿಕ್ಷಕರಾದ ಲಕ್ಷ್ಮಣ ಎಲ್.ಪವಾರ, ಪ್ರಮೋದ ಎಂ.ಜಾಧವ, ಕೃಷ್ಣಾ ಜಗನು ರಾಠೋಡ, ಸಮಾಜ ಕಲ್ಯಾಣ ಇಲಾಖೆ ಅಶೋಕ ನಾಯಕ ಸೇರಿದಂತೆ ಬಂಜಾರಾ ಸಮುದಾಯದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಭಜನ ಮಂಡಳಿ ಸದಸ್ಯರು, ಹಿರಿಯರು, ಮಹಿಳೆಯರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

9743497111, 9743496111

# ಶಿವನಾಮ ಸ್ಮರಣೆಯಿಂದ ಆತ್ಮಶುದ್ಧಿ



**ಕಲಬುರಗಿ:ಫೆ.16–**"ಓಂ ನಮಃ ಶಿವಾಯ" ಜಪದಿಂದ ಮೋಕ್ಷಮಾರ್ಗ -ಸರ್ವಂ ಶಿವಮಯಂ ಜಗತ್: ಶಿವಪುರಾಣ ಜ್ಞಾನಯಜ್ಞ ಮಹಾಶಿವರಾತ್ರಿಯ ದಿನ ಶಿವನಾಮಸ್ಮರಣೆಯಿಂದ ಜಾಗರಣೆ ಮಾಡುವುದು ಅತ್ಯಂತ ಪುಣ್ಯಕರವೆಂದು ತಿಳಿಸಿದರು. ಪಂಚಾಕ್ಷರ ಮಂತ್ರ "ಓಂ ನಮಃ ಶಿವಾಯ" ಜಪವು ಜೀವನವನ್ನು ಸಾರ್ಥಕ ಮತ್ತು ಸಫಲಗೊಳಿಸುವ ಮಹಾಮಂತ್ರವಾಗಿದ್ದು, ಮೋಕ್ಷ-ಮುಕ್ತಿ ಸಾಧನೆಗಾಗಿ ಪ್ರತಿದಿನ 11,000 ಬಾರಿ ಜಪ ಮಾಡುವುದನ್ನು ವೇದಮೂರ್ತಿ ಶ್ರೀ ಮೋಹನಭಟ್ ಜೋಶಿ ಸಲಹೆ ನೀಡಿದರು.

ಕರುಣೇಶ್ವರ ನಗರದ ಶ್ರೀ ಜೈ ವೀರ ಹನುಮಾನ್ ಮಂದಿರದಲ್ಲಿ ಮಹಾಶಿವರಾತ್ರಿ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ರುದ್ರಾಭಿಷೇಕದ ನಂತರ ಆಶೀರ್ವಚನ ನೀಡಿದ ಅವರು ರುದ್ರಾಭಿಷೇಕಕ್ಕೆ ವಿಶೇಷ ಮಹತ್ವವಿದ್ದು, ಇದರಿಂದ ನಿತ್ಯ ಜೀವನದ ಕಷ್ಟ-ಕಾರ್ಪಣ್ಯಗಳು ದೂರವಾಗಿ ಮಹಾದೇವನ ಕೃಪೆ ಲಭಿಸುತ್ತದೆ. ಭಕ್ತಿಭಾವದಿಂದ ಶಿವನ ಆರಾಧನೆ ಮಾಡಿದರೆ ಆತ್ಮಶುದ್ಧಿ, ಪುಣ್ಯಪ್ರಾಪ್ತಿ ಮತ್ತು ದೈವಾನುಗ್ರಹ ದೊರೆಯುತ್ತದೆ ಎಂದು ಹೇಳಿದರು.

ಮಹಾಶಿವರಾತ್ರಿಯ ಅಂಗವಾಗಿ ನಡೆದ "ಸರ್ವಂ ಶಿವಮಯಂ ಜಗತ್" ಶಿವಪುರಾಣ ಪ್ರವಚನವು ಮೂರು ದಿನಗಳ ಕಾಲ ಭಕ್ತಿಭಾವದಿಂದ ನಡೆಯಿತು. ಪ್ರವಚನದಲ್ಲಿ ವೇ.ಮೂ. ಡಾ. ಯೋಗೇಶ ಮೋಹನಭಟ್ ಜೋಶಿ ಅವರು ಶಿವಪುರಾಣವನ್ನು ಶ್ರದ್ಧೆ ಮತ್ತು ಭಕ್ತಿಯಿಂದ ಶ್ರವಣ ಮಾಡುವುದರಿಂದ ಪಾಪಗಳಿಂದ ವಿಮುಕ್ತಿ ದೊರೆಯುವುದಲ್ಲದೆ ಇದೇ ಜನ್ಮದಲ್ಲಿ ಮೋಕ್ಷಮಾರ್ಗ ಪ್ರಾಪ್ತಿಯಾಗುತ್ತದೆ. ಶಾಸ್ತ್ರಗಳ ಪ್ರಕಾರ ತ್ರಿಮೂರ್ತಿಗಳ ತತ್ವ ಒಂದೇ ಆಗಿದ್ದು, ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಪರಮತತ್ವದ ವಿಭಿನ್ನ ರೂಪಗಳೆಂದು ತಿಳಿಸಲಾಗಿದೆ. ಹರಿ-ಹರರಲ್ಲಿ ಬೇಧವಿಲ್ಲ ಎಂಬ ಸಂದೇಶವನ್ನು ಶಿವತತ್ವ ಸಾರುತ್ತದೆ.ಶಿವನ ಮಹಿಮೆ ಹಾಗೂ ಶಿವರಾತ್ರಿಯ ಮಹತ್ವವನ್ನು ಅರಿತು ಭಕ್ತಿಭಾವದಿಂದ ಹಬ್ಬವನ್ನು ಆಚರಿಸಿದಾಗ ಆತ್ಮಿಕ ಶಾಂತಿ ಮತ್ತು ದೈವಾನುಗ್ರಹ ದೊರೆಯುತ್ತದೆ. ಮಹಾಶಿವರಾತ್ರಿಯಲ್ಲಿ ಜಾಗರಣೆ, ಉಪವಾಸ, ಶಿವಲಿಂಗ ಪೂಜೆ ಹಾಗೂ ಭಕ್ತಿ ಭಾವದಿಂದ ಆರಾಧನೆ ಮಾಡಿದರೆ ಆತ್ಮಶುದ್ಧಿ ಮತ್ತು ಪುಣ್ಯಪ್ರಾಪ್ತಿ ದೊರೆಯುತ್ತದೆ ಎಂದು ಹೇಳಿದರು. ಸಾಕ್ಷಾತ್ ವಿಷ್ಣುವೇ ಸಾವಿರ ಕಮಲ ಪುಷ್ಪಗಳಿಂದ ಶಿವನನ್ನು ಪೂಜಿಸಿ ಸುದರ್ಶನ ಚಕ್ರವನ್ನು ಪಡೆದನು ಎಂಬ ಪೌರಾಣಿಕ ಪ್ರಸಂಗವೂ ಪ್ರಸಿದ್ಧ ಎಂದು ಹೇಳಿದರು.

ಮಹಾಶಿವರಾತ್ರಿ ಅಂಗವಾಗಿ ಬೆಳಿಗ್ಗೆ ಲಘು ರುದ್ರಾಭಿಷೇಕ, ಬಿಲ್ವಪತ್ರ ಅರ್ಚನೆ, ಪಂಚಾಮೃತ ಅಭಿಷೇಕ, ಮಹಾಮಂಗಳಾರತಿ ಕಬ್ಬಿನ ಹಾಲಿನಿಂದ ಅಭಿಷೇಕ, 11 ವೈದಿಕ ರಿಂದ 121 ಬಾರಿ ರುದ್ರ ಮಂತ್ರ ಪಠಣ ಮಾಡಲಾಯಿತು. ದೇವಸ್ಥಾನದ ಅಧ್ಯಕ್ಷ ಅವಿನಾಶ್ ಕುಲಕರ್ಣಿ, ಡಾ.ಶ್ರೀನಿವಾಸ್ ಜಾಗೀರ್ದಾರ್, ವಿಶ್ವಾಸ್ ಮೋಘೇಕರ್, ವಿನುತ ಜೋಶಿ, ಹೃಷಿಕೇಶ್ ಚೌಡಾಪುರಕರ್, ನಿತೀಶ್ ಜೋಶಿ, ಕೃಷ್ಣಾಜಿ ಕುಲಕರ್ಣಿ, ಗುರುರಾಜ ಭರತುನೂರು, ಜಗದೀಶ್ ಹುನಗುಂದ್, ವಿನೋದ ಸಾತಖೇಡ, ಶಾಮಾಚಾರ್ಯ ಜೋಶಿ, ಸಮೀರ್ ಕುಲಕರ್ಣಿ, ಶಂಕರರಾವ್ ಸಿಂದಗಿಕರ್, ವಿದ್ಯಾಸಾಗರ್ ಕುಲಕರ್ಣಿ, ಕಿಶನ್ ರಾವ್ ಕುಲಕರ್ಣಿ, ರಾಕೇಶ್ ಕುಲಕರ್ಣಿ, ಸಂತೋಷ್ ಕುಲಕರ್ಣಿ, ಪಾಂಡುರಂಗ ಜೋಶಿ, ಮುರಳಿಧರರಾವ್ ಕುಲಕರ್ಣಿ, ನರಸಿಂಗರಾವ್ ಕುಲಕರ್ಣಿ, ಸಂತೋಷ್ ಕುಲಕರ್ಣಿ, ಚಿದಂಬರ ದೇಶಪಾಂಡೆ, ದೇವಸ್ಥಾನದ ಅರ್ಚಕರಾದ ಪ್ರದ್ಯುಮ್ನಾಚಾರ್ಯ ಜೋಶಿ, ವೆಂಕಟೇಶಾಚಾರ್ಯ ನೇಲೋಗಿ, ವ್ಯವಸ್ಥಾಪಕರಾದ ಚಂದ್ರಕಾಂತ್ ಕಡೆಗಂಚಿ ಸೇರಿದಂತೆ ಭಜನಾ ಮಂಡಳಿ ಪಾರಾಯಣ ಸಂಘದ ಸದಸ್ಯರು ಭಕ್ತರು ಇದ್ದರು.

ಯುವ ಮಾರ್ಗ

www.yuvamarga.com Yuva Marga yuva_marga_

# ಹಲ್ಲೆ ಆರೋಪಿಗಳನ್ನು ಕೂಡಲೆ ಬಂದಿಸಬೇಕು: ಈರೇಶನಾಯಕ

ಯುವಮಾರ್ಗ ಸುದ್ದಿ

**ಮಾನ್ವಿ,ಫೆ.16–** ಪಟ್ಟಣದ ಪತ್ರಿಕಾ ಭವನದಲ್ಲಿ ಅಮರೇಶ್ವರ ಕ್ಯಾಂಪಿನ ಈರೇಶನಾಯಕ ಮಾತನಾಡಿ ತಾಲೂಕಿನ ಅಮರೇಶ್ವರ ಕ್ಯಾಂಪಿನ ಹಾಲು ಉತ್ಪದಕರ ಸಹಕಾರ ಸಂಘದ ಆಡಳಿತ ಮಂಡಳಿಯಲ್ಲಿ ಎಸ್.ಸಿ. ಮತ್ತು ಎಸ್.ಟಿ. ಸದಸ್ಯರ ನೇಮಕಕ್ಕೆ ಶ್ರಮಿಸಿದ ಎಂ. ಪ್ರಕಾಶ ರವರ ಮೇಲೆ 6 ಜನರ ಗುಂಪು ಹಲ್ಲೆ ನಡೆಸಿದ್ದು ಈ ಕುರಿತು ಮಾನ್ವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರು ಕೂಡ ಇದುವರೆಗೂ ಕೂಡ ಪೊಲೀಸರು ಹಲ್ಲೆ ಆರೋಪಿಗಳನ್ನು ಬಂದಿಸದೆ ಇರುವುದು ಸರಿಯಲ್ಲ ಅದ್ದರಿಂದ ಕೂಡಲೆ ಎಲ್ಲಾ ಅರೋಪಿತರನ್ನು ಬಂದಿಸ ಬೇಕು ಎಂದು ಒತ್ತಾಯಿಸಿದರು.




ರೈತ ಸಂಘದ ಜಿಲ್ಲಾಧ್ಯಕ್ಷರಾದ ಶಿವಾರ್ಜುನ ನಾಯಕ, ಮೌನೇಶನಾಯಕ ಮ್ಯಾಕಲ್,ನಾಗೇಂದ್ರ ಪ್ರಸಾದ್, ವಿಜಯಕುಮಾರ ಇದ್ದರು.

# ಸಂತ ಶ್ರೀ ಸೇವಾಲಾಲ್ ಮಹಾರಾಜರ ನೂತನ ವೃತ್ತ ಲೋಕಾರ್ಪಣೆ



ಯುವಮಾರ್ಗ ಸುದ್ದಿ

**ಮಾನ್ವಿ,ಫೆ.16–** ಪಟ್ಟಣದ ಮುಖ್ಯ ಹೆದ್ದಾರಿಯಲ್ಲಿನ ಮಾತಾ ಕಾಲೋನಿಯಲ್ಲಿ ಸಂತ ಶ್ರೀ ಸೇವಾಲಾಲ್ ಮಹಾರಾಜರ ಜಯಂತಿ ಕಾರ್ಯಕ್ರಮ ಅಂಗವಾಗಿ ಸಂತ ಶ್ರೀ ಸೇವಾಲಾಲ್ ಮಹಾರಾಜರ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸುವ ಮೂಲಕ ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ನೂತನ ವೃತ್ತವನ್ನು ಲೋಕಾರ್ಪಣೆಗೊಳಿಸಿ ಆಶೀರ್ವಾಚನ ನೀಡಿ ಸಂತ ಶ್ರೀ ಸೇವಾಲಾಲ್ ಮಹಾರಾಜರು ಬಂಜಾರ ಸಮುದಾಯದ ಮಹಾನ ಸಂತರಾಗಿದ್ದಾರೆ ಅವರು ತಮ್ಮ ಭಕ್ತರಿಗೆ ಅನೇಕ ಸಂದೇಶಗಳನ್ನು ನೀಡಿದ್ದು ಅವರು ತೋರಿದ ಮಾರ್ಗದಲ್ಲಿ ಪ್ರತಿಯೊಬ್ಬರು ನಡೆಯಬೇಕಾಗಿದೆ ಎಂದು ತಿಳಿಸಿದರು.

ಮಾಜಿ ಶಾಸಕ ಬಸನಗೌಡ ಬ್ಯಾಗವಾಟ್ ಮಾತ 'ನಾಡಿ ಪಟ್ಟಣದಲ್ಲಿ ಎಲ್ಲಾ ಸಮುದಾಯಗಳವರ ಮಹಾನಿಯರ ವೃತ್ತಗಳಿದ್ದು ಇಂದು ಸಂತ ಶ್ರೀ ಸೇವಾಲಾಲ್ ಮಹಾರಾಜರ ವೃತ್ತವನ್ನು ಅನಾವರಣ ಮಾಡುವ ಮೂಲಕ ಸಂತ ಶ್ರೀ ಸೇವಾಲಾಲ್ ಮಹಾರಾಜರ ಜೀವನ ಹಾಗೂ ತತ್ವಗಳನ್ನು ತಿಳಿಯುವುದಕ್ಕೆ ಸಾಧ್ಯವಾಗಿದೆ ಬಂಜಾರ ಸಮುದಾಯ ಸಮಾಜದಲ್ಲಿ ಅತ್ಯಂತ ಚಿಕ್ಕ ಸಮುದಾಯವಾಗಿದ್ದರು ಕೂಡ ಇಂದು ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಮುಂದು ವರೆಯುವುದಕ್ಕೆ ಅಗತ್ಯ ಶ್ರಮವಹಿ ಸುತ್ತಿರುವುದನ್ನು ಕಾಣಬಹುದಾಗಿದೆ ತಾಲೂಕಿನ ಬಂಜಾರ ಸಮುದಾಯದವರ ವಿವಿಧ ಕಾರ್ಯಕ್ರಮಗಳಿಗೆ ಅಗತ್ಯ ವಿರುವ ಸಮುದಾಯ ಭವನ ನಿರ್ಮಾಣಕ್ಕೆ ಸರ್ಕಾರವನ್ನು ಒತ್ತಾಯಿ ಸಲಾಗುವುದು ಎಂದು ತಿಳಿಸಿದರು.

ಮಾಜಿ ಶಾಸಕ ರಾಜಾ ವೆಂಕಟಪ್ಪನಾಯಕ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಿವರಾಜ ವಕೀಲರು, ಬಿ.ಕೆ, ಅಮರೇಶಪ್ಪ. ಶರಣಪ್ಪಗೌಡ ನಕ್ಕುಂದಿ, ನಾಗರಾಜ ನಾಯಕ , ಶ್ರೀರಾಮುಲು, ಗೋಪಾಲನಾಯಕ ನೀರಮಾನ್ವಿ, ತಾ.ವೀರಶೈವಲಿಂಗಾಯತ ಸಮಾಜದ ತಾ,ಅಧ್ಯಕ್ಷರಾದ ಹರಿಹರಪಾಟೀಲ್, ಅಮರೇಗೌಡ, ಆಲ್ ಇಂಡಿಯಾ ಬಂಜಾರ ಸೇವಾ ಸಂಘ ಬೆಂಗಳೂರು ರಾಜ್ಯ ಉಪಾಧ್ಯಕ್ಷರಾದ ಗೋವಿಂ ದರಾಜ್ ವಕೀಲರು. ರಾಜ್ಯ ಸಂಚಾಲಕರಾದ ಮೌನೇಶ್ ರಾಠೋಡ್ ವಕೀಲರು, ಜಿಲ್ಲಾಧ್ಯಕ್ಷರಾದ ಅಮರೇಶ್ ರಾಠೋಡ್ , ಜಿಲ್ಲಾ ಉಪಾಧ್ಯಕ್ಷರಾದ ಯಂಕಪ್ಪ ಪೂಜಾರಿ , ಜಿಲ್ಲಾ ಜಂಟಿ ಕಾರ್ಯದರ್ಶಿ ವೆಂಕಟೇಶ್ ಜಾಧವ್ , ತಾ.ಅಧ್ಯಕ್ಷರಾದ ಗೋವಿಂದ್ ಪವಾರ್ , ಗೌರವಧ್ಯ ಕ್ಷರಾದ ಯಂಕಪ್ಪ ಕಾರಬಾರಿ , ಕಾರ್ಯಾಧ್ಯಕ್ಷರಾದ ಗೋವಿಂದ್ ಕಂಡಕ್ಟರ್, ಸಂಘಟನಾ ಕಾರ್ಯದರ್ಶಿ ಗೋವಿಂದ್ ಚಿನ್ನ ನಾಯಕ್, ತಾ. ಉಪಾಧ್ಯಕ್ಷರಾದ ಕಮಲಪ್ಪ ರಾಠೋಡ್. ಪಾಂ ಡುರಂಗ, ತಾ. ಜಂಟಿ ಕಾರ್ಯದರ್ಶಿ ಚಿನ್ನರೆಡ್ಡಿ ರಾಠೋಡ್, ತಾ.ಪ್ರಧಾನ

# ಎನ್ ಎಸ್ ರವಿ ಬೋಸುರಾಜು ಅವರ 53 ನೆಯ ಜನ್ಮದಿನ ನೆರಳು ಅನಾಥಾಶ್ರಮದಲ್ಲಿ ಆಚರಣೆ

ಯುವಮಾರ್ಗ ಸುದ್ದಿ

**ಮಾನ್ವಿ,ಫೆ.16–**ಯುವಕರ ಕಣ್ಮಣಿ ಬಡವರ ಬಂಧು ದೀನದಲಿತರ ಆಶಾಕಿರಣ ಹಾಗೂ ರಾಜ್ಯ ಯುವ ಕಾಂಗ್ರೆಸ್ ಮುಖಂಡರಾದ ಸನ್ಮಾನ್ಯ ಶ್ರೀ ಎನ್ ಎಸ್ ರವಿ ಬೋಸುರಾಜು ಅವರ 53 ನೆಯ ಜನ್ಮದಿನ ಅಂಗವಾಗಿ ಇಂದು ಮಾನ್ವಿ ಪಟ್ಟಣದ ನೆರಳು ಅನಾಥಾಶ್ರಮದಲ್ಲಿ ಅವರ ಕೇಕ್ ಕತ್ತರಿಸುವ ಮುಖಾಂತರ ಅವರ ಹುಟ್ಟುಹಬ್ಬವನ್ನು ಸರಳ ರೀತಿಯಲ್ಲಿ ಆಚರಿಸಲಾಯಿತು ಈ ಸಂದರ್ಭದಲ್ಲಿ ಇಲ್ಲಿರುವ ಅನಾಥರಿಗೆ ಹಣ್ಣು ಹಂಪಲು ಹಾಗೂ ಊಟದ ವ್ಯವಸ್ಥೆಯನ್ನು ಮಾಡಿಸಲಾಗಿತ್ತು ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಯುವ ಮುಖಂಡರಾದ ಮಿರ್ಜಾ ಆದಮ್ ಬೇಗ ಅವರು ತಮ್ಮ ನಾಯಕರಾದ ಎನ್ ಎಸ್ ರವಿ ಬೋಸರಾಜ್ ಅವರ ಹುಟ್ಟುಹಬ್ಬ ಇದ್ದ ಕಾರಣ ಅಲ್ಲಿರುವ ಅನಾಥರಿಗೆ ತಮ್ಮ ಸ್ವಂತ ಹಣದಿಂದ 51,000 ರೂಪಾಯಿಗಳು ದೇಣಿಗೆ ನೀಡಿದರು ಈ ಸಂದರ್ಭದಲ್ಲಿ ಅವರು ಮಾತನಾಡಿ ಇಲ್ಲಿರುವಂತಹ ಅನಾಥರಿಗೆ ನಾವು ನಿಮ್ಮ ಜೊತೆಯಲ್ಲಿ ಇದ್ದೀವಿ ನೀವು ಯಾವುದೇ ಕಾರಣಕ್ಕೂ ನೀವು ಅನಾಥರಲ್ಲ ನಾವೆಲ್ಲರೂ ಒಂದು ಕುಟುಂಬ ರೀತಿಯಲ್ಲಿ ಬಾಳಬೇಕು ನಾವೆಲ್ಲರೂ ಮನುಷ್ಯರಾಗಿ ಹುಟ್ಟಿದ




ಮೇಲೆ ಎಲ್ಲರೂ ಪ್ರೀತಿ ವಿಶ್ವಾಸದಿಂದ ಸಮಾಜದಲ್ಲಿ ಬಾಳಬೇಕು ಎಂದು ಹೇಳಿದರು ಅದೇ ರೀತಿ ನಮ್ಮ ನಾಯಕರಾದ ಎನ್ ಎಸ್ ರವಿ ಬೋಸರಾಜ ಅವರು ರಾಯಚೂರು ಜಿಲ್ಲೆಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳು ಮಾಡ್ತಾ ಇದ್ದಾರೆ

ಅವರು ಎಲ್ಲ ಜಾತಿ ಜನಾಂಗದವರನ್ನು ಪ್ರೀತಿಸುವಂಥ ಏಕೈಕ ನಾಯಕರಾಗಿದ್ದಾರೆ ಅವರಿಗೆ ದೇವರು ಆರೋಗ್ಯ ಆಯಸ್ಸು ಕೊಟ್ಟು ಕಾಪಾಡಲಿ ಎಂದು ಹೇಳಿದರು ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರದ. ಮಿರ್ಜಾ ಆದಮ್ ಬೇಗ. ಬ್ರಹ್ಮಣ ಸಮಾಜ ಅಧ್ಯಕ್ಷರಾದ ವಿಜಯಕುಮಾರ್ ಹಾಗೂ ಕಾಂಗ್ರೆಸ್ ಯುವ ನಾಯಕರಾದ ಮೊಹಮ್ಮದ್ ರೆಹ್ಮತ್ ಅಲಿ ಹಾಗೂ ಮೊಹಮ್ಮದ್ ಆಶಿಮ್ ಖುರೇಷಿ. ಹಂಪಯ್ಯ ನಾಯಕ್ ಬೆಳಗಿನ ಪೇಟೆ. ಸೈಯದ್ ರಶೀದ್. ಕಾಮೇಶ್ ಮಂದಕಲ್. ಅಬ್ದುಲ್ ಲತೀಫ್. ಮುಸ್ತಫ ಕುರೇಶಿ. ಸೈಯದ್ ಮುಸ್ತಫಾ ಕಪಗಲ್ .ಕೆ ಸಮೀರ್ ಪಾಷಾ. ವಿನೋದ್ ನಾಯಕ್. ಪ್ರಕಾಶ್. ಆಲಂ ಬಾಷಾ. ಸಮೀರ್. ವಿರುಪಾಕ್ಷಿ ನಾಯಕ್. ಸೈಯದ್ ಸಲೀಂ. ಶರಣಬಸವ. ಶಂಶು ಖುರೇಶಿ. ಚಾಂದ್ ಪಾಷಾ. ಹನುಮಂತ. ಹಾಗೂ ಹಲವಾರು ಕಾಂಗ್ರೆಸ್ ಪಕ್ಷದ ಯುವ ಮುಖಂಡರು ಪಾಲ್ಗೊಂಡಿದ್ದರು

# ಮಾನ್ವಿ ಪಬ್ಲಿಕ್ ಶಾಲೆಗೆ 11 ನೇ ವಾರ್ಷಿಕೋತ್ಸವದ ಸಂಭ್ರಮ



ಯುವಮಾರ್ಗ ಸುದ್ದಿ

**ಮಾನ್ವಿ,ಫೆ.16–** ವಿದ್ಯಾರ್ಥಿಗಳು ಶಿಕ್ಷಕರ ಮಾತುಗಳನ್ನು ಕೇಳಿ, ವಿದ್ಯಾಭ್ಯಾಸದಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಳ್ಳಬೇಕು ಸಮಾಜಕ್ಕೆ ಉತ್ತಮ ನಾಗರಿಕರಾಗಬೇಕು ಅಲ್ಲದೆ ಸಾಮರಸ್ಯದಿಂದ ಕೆಲಸ ಕಾರ್ಯಗಳಲ್ಲಿ ತೊಡಗಿಸಿ ಕೊಳ್ಳಬೇಕು ಎಂದು ಮಹಾರಾಷ್ಟ್ರದ ಧರ್ಮ ಗುರುಗಳಾದ ಸೈಯದ್ ಹೈದರ್ ಪಾಷಾ ಖಾದ್ರಿ ಸಾಹೇಬ್ ಸಜ್ಜಾದ್ ಎ ನಶಿನ್ ನೀಲಂಗ ಶರೀಫ್ ಇವರು ನುಡಿದರು. ಅವರು ನಗರದ ಮಾನ್ವಿ ಪಬ್ಲಿಕ್ ಶಾಲೆಯ ಹನ್ನೊಂದನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ನಜಿರುದ್ದೀನ್ ಖಾದ್ರಿ ಮಾಜಿ ಪುರಸಭಾ ಅಧ್ಯಕ್ಷರು, ಸೈಯದ್ ಸಜ್ಜಾದ ಹುಸೇನಿ ಮತವಾಲೆ, ಸೈಯದ್ ಖಾಲಿದ್ ಖಾದ್ರಿ ಹಿರಿಯ ಕಾಂಗ್ರೆಸ್ ಮುಖಂಡರು, ಮಾನ್ವಿ ತಾಲೂಕ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ರಾಜ ಸುಭಾಷ್ ಚಂದ್ರ ನಾಯಕ್, ಪ್ರಧಾನ ಕಾರ್ಯದರ್ಶಿ ರಾಜು ತಾಳಿಕೋಟೆ,ಒಕ್ಕೂಟದ ಉಪಾಧ್ಯಕ್ಷ ಎಂ. ಎಚ್.ಮುಖೀ ಮ್,ಮಾತವಲೇ ಶಾಲೆಯ ಬಾಬಾ ಮತ್ವಾಲೆ, ಅಲ್ಫಾಖಾನ್ ಶಾಲೆಯ ಹರೂನ್,ಡಾಫ್ಪೋದಿಲ್ಸ್ ಶಾಲೆಯ ಅಲೀಮ್ ಖಾನ್, ಸರ್ವೋದಯ ಸಂಸ್ಥೆಯ ಆಂಜನೇಯ, ಬೀ ವಿ ಆರ್ ಶಾಲೆಯ ಪದ್ಮಾವತಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಬಿ ಬಲರಾಮಕೃಷ್ಣ ವಕೀಲರು, ಕಾರ್ಯದರ್ಶಿ ಎಂ ರಾಮಲಿಂಗಪ್ಪ, ರಾಯಚೂರು ಜಿಲ್ಲಾ ಸ್ಕೌಟ್ ಗೈಡ್ ಸಂಘಟಕ ಅಂಬಣ್ಣ ನಾಯಕ್ ಮ್ಯಾಕಲ್, ಅರುಣ್ ಚಂದ ಅಧ್ಯಕ್ಷರು ತಾಲೂಕ ವೀರಶೈವ ಸಮಾಜ, ರೇವಣಸಿದ್ದಯ್ಯ ಪುರಸಭಾ ಸದಸ್ಯರು, ಚಾಂದ್ ಪಾಷಾ ಗುತ್ತೇದಾರರು, ಅರವಿಂದ ದೇಸಾಯಿ ವಕೀಲರು,, ಸೈಯದ್ ಅಕ್ಬರ್ ಪಾಶಾ ಹುಸೇನಿ ಅಧ್ಯಕ್ಷರು ದಾರು ಸಲಾಂ ಬ್ಯಾಂಕ್ ಮಾನ್ವಿ ಸೈಯದ್ ಮೀನಾಜ್ ಉಲ್ಲ ಹಸನ್ ಪ್ರಾಧ್ಯಾಪಕರು,ಶಾಲಾ ಕಾರ್ಯದರ್ಶಿ ಸೈಯದ್ ಮುಜಾತ ಬಾ ಖಾದ್ರಿ , ಮುಖ್ಯ ಗುರು ನಾಗರತ್ನ ದೇಸಾಯಿ ಸೇರಿದಂತೆ ಅನೇಕ ಗಣ್ಯರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಶಾಲಾ ವಿದ್ಯಾರ್ಥಿಗಳಿಂದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನಡೆಯಿತು. ಕಾರ್ಯಕ್ರಮದ ಸಂದರ್ಭದಲ್ಲಿ ಸ್ಕೌಟ್ ಗೈಡ್ ವಿದ್ಯಾರ್ಥಿಗಳ ಸೇವೆ, ಅತಿಥಿಗಳ ಸ್ವಾಗತ ನೆರೆದ ಪಾಲಕರನ್ನು ಹಾಗೂ ಗಣ್ಯರನ್ನು ಆಕರ್ಷಿಸಿ ತು. ಶಾಲಾ ಶಿಕ್ಷಕರಿಗೆ ಅವರ ನಿಸ್ವಾರ್ಥ ಸೇವೆಗಾಗಿ ಪ್ರಸಂಶ ಪತ್ರವನ್ನು ನೀಡಿ ಗೌರವಿಸಲಾಯಿತು.

# ಹುಟ್ಟುಹಬ್ಬದ ಸಂಭ್ರಮದ ನಡುವೆ ಮಾನವೀಯತೆ: ಆಸ್ಪತ್ರೆ ರೋಗಿಗಳಿಗೆ ಹಣ್ಣು ವಿತರಿಸಿದ ರವಿ ಬೋಸರಾಜ್ ಬೆಂಬಲಿಗರು."

ಯುವಮಾರ್ಗ ಸುದ್ದಿ

**ಸಿರವಾರ,ಫೆ.16–** ಯುವಕರ ಕಣ್ಮಣಿ ( ಯುವಕರಿಗೆ ಸ್ಫೂರ್ತಿ ) ಯುವ ನಾಯಕ ರವಿ ಬೋಸರಾಜ್ ಅವರ ಜನ್ಮದಿನದ ಅಂಗವಾಗಿ ಇಂದು ಸಿರವಾರ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಹಣ್ಣು-ಹಂಪಲು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ರವಿ ಬೋಸರಾಜ್ ಅವರ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಅಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಆರೋಗ್ಯ ವಿಚಾರಿಸಿದರು. ನಂತರ ಪ್ರತಿಯೊಬ್ಬರಿಗೂ ಹಣ್ಣು ಮತ್ತು ಸಿಹಿ ಹಂಚಿ ಸಂಭ್ರಮಿಸಿದರು.

**ಸಮಾಜಮುಖಿ ಕಾರ್ಯ:** ಜನ್ಮದಿನದ ಅಂಗವಾಗಿ ಕೇಕ್ ಕತ್ತರಿಸುವ ಬದಲು, ಆಸ್ಪತ್ರೆಯ ರೋಗಿಗಳಿಗೆ ಸಹಾಯ ಮಾಡುವ ಮೂಲಕ ಅಭಿಮಾನಿಗಳು ಮಾದರಿಯಾದರು.

ಶುಭಾಶಯಗಳ ಮಹಾಪೂರ: ಸಿರವಾರ ತಾಲ್ಲೂಕಿನಾದ್ಯಂತ ರವಿ ಬೋಸರಾಜ್ ಅವರ ಪರವಾಗಿ ಅಭಿನಂದನಾ ಬ್ಯಾನರ್‌ಗಳು ರಾರಾಜಿಸುತ್ತಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಶುಭಾಶಯಗಳ ಸುರಿಮಳೆಯೇ ಹರಿಯುತ್ತಿದೆ.

**ನಾಯಕರ ಹಾರೈಕೆ:** "ರವಿ ಬೋಸರಾಜ್ ಅವರು ಯುವಜನತೆಗೆ ಸ್ಫೂರ್ತಿಯಾಗಿದ್ದು, ಅವರ ನೇತೃತ್ವದಲ್ಲಿ ತಾಲ್ಲೂಕಿನಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕೆಲಸಗಳು ನಡೆಯಲಿ," ಎಂದು ಕಾರ್ಯಕರ್ತರು ಆಶಿಸಿದರು.

ಈ ಸಂದರ್ಭದಲ್ಲಿ ಸ್ಥಳೀಯ ಕಾಂಗ್ರೆಸ್





ಮುಖಂಡರು, ರವಿ ಬೋಸರಾಜ್ ಅಭಿಮಾನಿ ಬಳಗದ ಸದಸ್ಯರು ಮತ್ತು ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದ್ರಿ. ಮಾಜಿ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ವೈಭೂಪನಗೌಡ. ಶ್ರೀನಿವಾಸ್ ಜಾಲಪುರ್. ಸೂರಿ ದುರ್ಗಣ್ಣ. ಹೆಚ್‌ಕೆ ಅಮರೇಶ್. ಮಾಜಿ ಪಟ್ಟಣ ಪಂಚಾಯತ್ ಉಪಾಧ್ಯಕ್ಷರಾದ ಚನ್ನಬಸವ ಗಡ್ಲ. ಇರ್ಫಾನ್ ಬಡೆಗರ್.ಪಾಷಾ ಬಡೆಘರ್. ಅಬ್ರಹಾಂ ಹೊನಟಗಿ ರಂಗನಾಥ್ ನಾಯಕ್.ಬಸವರಾಜ್ ಗಡ್ಲ. ಚುಕ್ಕಿ ಉಮಾಪತಿ. ಶಿವು ಬೆಳವಿನೂರ್ .ಬಸವರಾಜ್ ದಳಪತಿ. ಯುವ ಘಟಕ ಅಧ್ಯಕ್ಷ ಮಹಮ್ಮದ್ ರಫಿ ಚಂದ್ರು ಹಡಪದ.ಹಲವಾರು ಕಾರ್ಯಕರ್ತರು ಉಪಸ್ಥಿತರಿದ್ದರು ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಂಗೀತ ಶಿಕ್ಷಕರ ನೇಮಕಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

**ರಾಯಚೂರು ಫೆ,16–** ಕೇಂದ್ರ ಸರ್ಕಾರದ ಮಿಷನ್ ವಾತ್ಸಲ್ಯ ಮಾರ್ಗಸೂಚಿಯಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ರಾಯಚೂರು ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿನ ಮಕ್ಕಳಿಗಾಗಿ ಸಂಗೀತ ಹೇಳಿಕೊಡಲು ಇಬ್ಬರು ಅರೆಕಾಲಿಕ ಸಂಗೀತ ಶಿಕ್ಷಕರನ್ನು ನೇಮಕಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಅರ್ಜಿಯೊಂದಿಗೆ ವಿದ್ಯಾರ್ಹತೆ, ಅನುಭವ ಮತ್ತು ಇತರೆ ದಾಖಲಾತಿಗಳನ್ನು ಲಗತ್ತಿಸಿ ದಿನಾಂಕ: 23-02-2026ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಾಲಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಾರ್ಯಾಲಯ ಮ.ನಂ. 1-9-138 ಮಾರೆಮ್ಮ ದೇವಸ್ಥಾನದ ಹತ್ತಿರ, ಆಜಾದ ನಗರ ರಾಯಚೂರು ದೂರವಾಣಿ ಸಂಖ್ಯೆ: 08532-226226ಗೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಅಮರೇಶ ಹಾವಿನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫೆ.21ರಂದು ದಿಶಾ ಸಮಿತಿ ಸಭೆ

**ರಾಯಚೂರು ಫೆ,16–**ರಾಯಚೂರು ಹಾಗೂ ಕೊಪ್ಪಳ ಲೋಕಸಭಾ ಕೇತ್ರದ ಸದಸ್ಯರ ಸಹ ಅಧ್ಯಕ್ಷತೆಯಲ್ಲಿ ಫೆ.21ರ ಬೆಳಿಗ್ಗೆ 10.30ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ದಿಶಾ ಸಮಿತಿ ಸಭೆ ನಡೆಯಲಿದೆ. ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಫೆ.16ರ ಸೋಮವಾರ ಮಧ್ಯಾಹ್ನದೊಳಗಾಗಿ ಜನವರಿ 2026ರ ಮಾಹೆಯ ಅಂತ್ಯದ ಪ್ರಗತಿ ವರದಿಯನ್ನು dscouncilraichur13@gmail.com ಗೆ ಕಳುಹಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H